
ಆದ್ಯ ವಚನಕಾರ
ಜೇಡರ ದಾಸಿಮಯ್ಯನವರ ವಚನಗಳು

ಪ್ರಧಾನ ಸಂಪಾದಕರು : ಡಾ. ಎಂ.ಎಂ.ಕಲಬುರ್ಗಿ । ಸಂಪಾದಕರು : ಡಾ. ಎಸ್.ವಿದ್ಯಾಶಂಕರ



ಪ್ರಕಾಶಕರು
ಇ-ಸಾಹಿತ್ಯ ಡಾಕ್ಯುಮೆಂಟೇಶನ್ ಫೋರಂ
ಬೆಂಗಳೂರು

ಆದ್ಯ ವಚನಕಾರ
ಜೇಡರ ದಾಸಿಮಯ್ಯನವರ ವಚನಗಳು

ಪ್ರಧಾನ ಸಂಪಾದಕರು:

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು:

ಡಾ. ಎಸ್. ವಿದ್ಯಾಶಂಕರ

ಪ್ರಕಾಶಕರು

ಇ–ಸಾಹಿತ್ಯ ಡಾಕ್ಯುಮೆಂಟೇಶನ್ ಫೋರಂ

ಬೆಂಗಳೂರು

AADHYAA VACHANAKARA JEDARA DASIMAYYANAVRA VCHANAGALU
Edited by **Dr. S. Vidyashankar** for Kannada Pustaka Pradhikara, Published by **e-Sahithya Documentation Forum,** 239, 5th 'B' Cross, Domlur Layout, Bengaluru – 560071. India. Tel: 8300101020, Mobile: 9886867185, email: ashok@esahithya.com. website: www.esahithya.com

ಪ್ರಥಮ ಮುದ್ರಣ	:	ಮಾರ್ಚ್ ೨೦೨೬
ಬಳಸಿರುವ ಕಾಗದ	:	೭೦ ಜಿ.ಎಸ್.ಎಂ
ಗ್ರಂಥ ಸ್ವಾಮ್ಯ	:	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಆಳತೆ	:	೧/೮ ಡೆಮ್ಮಿ
ಪುಟಗಳು	:	xvi+೩೨=೪೮
ಪ್ರತಿಗಳು	:	೨,೦೦೦
ISBN No.	:	978-81-999876-8-5
ಪುಸ್ತಕದ ಬೆಲೆ	**:**	**₹ ೨೦/– (ಕನಿಷ್ಠ ೨೫ ಪುಸ್ತಕಗಳ ಖರೀದಿಸಿದರೆ)** **₹ ೪೯/– (ಬಿಡಿ ಪ್ರತಿಗೆ)**
ಮುಖಪುಟ	:	ಅಶೋಕ ದೊಮ್ಮಲೂರು
ಅಕ್ಷರ ಜೋಡಣೆ	:	ಅಶೋಕ ದೊಮ್ಮಲೂರು
ಪ್ರಕಾಶಕರು	:	**ನಿರ್ದೇಶಕರು** **ಇ–ಸಾಹಿತ್ಯ ಡಾಕ್ಯುಮೆಂಟೇಶನ್ ಫೋರಂ** **೨೩೯, ೫ನೆಯ 'ಬಿ' ರಸ್ತೆ,** **ದೊಮ್ಮಲೂರು ಬಡಾವಣೆ,** **ಬೆಂಗಳೂರು–೫೬೦ ೦೭೧.** **ಮೊಬೈಲ್: ೮೩೦೦೧೦೧೦೨೦**
ಮುದ್ರಣಕಾರರು	:	**ಸತ್ಯಶ್ರೀ ಪ್ರಿಂಟರ್ಸ್** ಮೈಸೂರು ರಸ್ತೆ, ಬೆಂಗಳೂರು ದೂರವಾಣಿ : ೦೮೦–೨೬೭೪೮೮೧೧

ಹಾರೈಕೆ

ಕನ್ನಡ ಸಾಹಿತ್ಯಪರಂಪರೆಯ ಇತಿಹಾಸ ಮತ್ತು ವರ್ತಮಾನಗಳಲ್ಲಿ ಹನ್ನೆರಡನೆಯ ಶತಮಾನದ ಶರಣರು ರಚಿಸಿದ ವಚನ ಸಾಹಿತ್ಯ ಕುರಿತಂತೆ ನಡೆದಿರುವಷ್ಟು ಪ್ರಮಾಣದ ಅಧ್ಯಯನ, ಚಿಂತನೆ, ಚರ್ಚೆ, ವ್ಯಾಖ್ಯಾನ, ವಿಶ್ಲೇಷಣೆ, ವಿಮರ್ಶೆ, ಸಂಶೋಧನೆ, ಪ್ರಕಟಣೆ ಇತ್ಯಾದಿಗಳು ಬಹುಶಃ ಕನ್ನಡ ಸಾಹಿತ್ಯದ ಇತರ ಯಾವುದೇ ಪ್ರಕಾರಗಳನ್ನು ಕುರಿತು ನಡೆದಿಲ್ಲವೆಂದು ಕಾಣುತ್ತದೆ.

ಇದಕ್ಕೆ ಕಾರಣ ವಚನ ಸಾಹಿತ್ಯದ ವೈಶಿಷ್ಟ್ಯ. ಅದು ಭಾಷೆ, ಶೈಲಿ, ಬಂಧ, ಅರ್ಥ, ಅನ್ವಯ ಹೀಗೆ ಎಲ್ಲ ದೃಷ್ಟಿಯಿಂದಲೂ ವಿವೇಚನೆಯ ಒರೆಗಲ್ಲಿಗೆ ನಿಲ್ಲುವ ಅಪೂರ್ವ ಪ್ರಯೋಗವಾಗಿರುವುದು. ವಚನ ಸಾಹಿತ್ಯ ಕೇವಲ ವಿದ್ವತ್ ವಲಯಕ್ಕಷ್ಟೇ ಸೀಮಿತವಾಗದೆ, ಸಾಮಾನ್ಯ ಜನಜೀವನದ ಬದುಕಿನೊಡನೆ ನಿಕಟ ಸಂಬಂಧವಿರುವ ಮತ್ತು ಅಧ್ಯಯನ, ಸಂಶೋಧನೆ, ಪ್ರಕಟಣೆ, ಪ್ರಸಾರ ಕಾರ್ಯಗಳಿಗೆ ವಿಸ್ತೃತ ಅವಕಾಶವಿರುವ ಸಾಹಿತ್ಯ. ಅದು ಅಗೆದಷ್ಟು ಸಿಗುವ ಅನುಪಮ ನಿಧಿ.

ಕಾಲದ ಧೂಳಿನಲ್ಲಿ ಕಣ್ಮರೆಯಾಗಿದ್ದ ವಚನ ಸಾಹಿತ್ಯವನ್ನು ಮೊಟ್ಟಮೊದಲು ಬೆಳಕಿಗೆ ತಂದವರು ವಚನ ಪಿತಾಮಹ ಎಂದೇ ಹೆಸರಾಗಿರುವ ಲಿಂ. ರಾವ್ ಬಹದ್ದೂರ್ ಡಾ. ಫ.ಗು. ಹಳಕಟ್ಟಿ ಅವರು. ಆನಂತರ ನಾಡಿನ ಅನೇಕ ವಿದ್ವಾಂಸರು, ಸಂಶೋಧಕರು ಮತ್ತು ವೈಚಾರಿಕ ಚಿಂತಕರು ವಚನ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ.

ಇದುವರೆಗೆ ನಮಗೆ ದೊರೆತಿರುವ ವಚನಗಳ ಸಂಖ್ಯೆಯನ್ನು ಗಮನಿಸಿದರೆ, ಬಹುಶಃ ಪೂರ್ಣ ಕಳೆದು ಹೋಗಿ ಕಣ್ಮರೆಯಾದ ವಚನಗಳ ಸಂಖ್ಯೆಯೇ ಹೆಚ್ಚಿರಬೇಕು. ಏನಿದ್ದರೂ ವಚನಗಳ ಸಾಹಿತ್ಯಮೌಲ್ಯ ಮತ್ತು ಪ್ರಸ್ತುತತೆಯ ಮಹತ್ವವನ್ನು ಮನಗಂಡು ವಿದ್ವಾಂಸರ ಸಲಹೆಯಂತೆ, ಕರ್ನಾಟಕ ಸರ್ಕಾರ ಸಮಗ್ರ ವಚನಗಳ ಸಂಪುಟಗಳನ್ನು ಪ್ರಕಟಿಸಿರುವುದು ಅತ್ಯಂತ ಸ್ತುತ್ಯಾರ್ಹ ಕೆಲಸ. ಆ ಸಂಪುಟಗಳು ಹೊರಬಂದ ಮೇಲೆ ವಚನಸಾಹಿತ್ಯ ಕುರಿತಂತೆ ಅಧ್ಯಯನ, ಸಂಶೋಧನೆ, ಚರ್ಚೆ–ಚಿಂತನೆಗಳು ಹಿಂದಿಗಿಂತ ವ್ಯಾಪಕವಾಗಿ ನಡೆಯತೊಡಗಿವೆ ಎಂದು ಹೇಳಬಹುದು.

ವಚನಸಾಹಿತ್ಯ ಮೂಲ ಹಸ್ತಪ್ರತಿ, ನಂತರದ ಮುದ್ರಣಗಳ ಹಂತ ದಾಟಿ, ಈಗ ಆಧುನಿಕ ತಂತ್ರಜ್ಞಾನದ **'ಡಿಜಿಟಲೀಕರಣ'**ದ ಹಂತ ತಲುಪಿದೆ. ಈಗಾಗಲೇ ಅಂತಹ ದಾಖಲೀಕರಣ ಕ್ಷೇತ್ರದಲ್ಲಿ ಹಿರಿಯ ತಜ್ಞರಾಗಿರುವ ಶ್ರೀ ಅಶೋಕ ದೊಮ್ಮಲೂರು ಅವರು ನಾಡಿನ ಅನೇಕ ಮಠಗಳು, ವೈಯಕ್ತಿಕ ಸಂಗ್ರಹಗಳು, ವಿಶ್ವವಿದ್ಯಾಲಯಗಳು ಮೊದಲಾದ ಕಡೆ ಇರುವ ಲಕ್ಷಾಂತರ ತಾಡೋಲೆಗಳು

ಕೈಬರಹದ ಪ್ರತಿಗಳು, ಶಾಸನಗಳು ಇತ್ಯಾದಿ ಮೂಲಗಳಿಂದ ದೊರೆಯುವ ದಾಖಲೆಗಳನ್ನು ಲಕ್ಷ-ಲಕ್ಷ ಸಂಖ್ಯೆಯಲ್ಲಿ ಡಿಜಿಟಲೀಕರಣ ಮಾಡಿ, ಏಕವ್ಯಕ್ತಿಯ ದಾಖಲೆ ಸ್ಥಾಪಿಸಿದ್ದಾರೆನ್ನಬಹುದು.

ಅಶೋಕ ದೊಮ್ಮಲೂರು ಅವರು ಕರ್ನಾಟಕದ ಮೂಲೆ-ಮೂಲೆಗಳಲ್ಲದೆ, ಭಾರತದ ರಾಜಸ್ಥಾನ, ಉತ್ತರಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮುತ್ತಿತರ ರಾಜ್ಯಗಳೂ ಸೇರಿದಂತೆ ನೆರೆಯ ನೇಪಾಳದವರೆಗೂ ಸಂಚರಿಸಿ, ಅಲ್ಲೆಲ್ಲ ದೊರಕಿದ ಸಾಧ್ಯವಿದ್ದಷ್ಟು ಕನ್ನಡ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಿದ್ದಾರೆ. ವಚನ ಸಾಹಿತ್ಯ ಮತ್ತು ವಚನಕಾರರಿಗೆ ಸಂಬಂಧಿಸಿದ ಕ್ಷೇತ್ರ ಶೋಧನೆಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡಿರುವ ಅಶೋಕ ದೊಮ್ಮಲೂರು ಅವರು ಈಗ ಒಂದು ರೀತಿಯಲ್ಲಿ ವಚನ ಸಾಹಿತ್ಯದ ವಿಶ್ವಕೋಶವೇ ಆಗಿದ್ದಾರೆ.

ಇವರ ದಾಖಲೀಕರಣದ ಸಾಹಸ ಯಾತ್ರೆಯಲ್ಲಿ ನಾಡಿನ ಅನೇಕ ಹಸ್ತಪ್ರತಿ ತಜ್ಞರು, ಸಂಶೋಧಕರು, ಅಧ್ಯಯನಾಸಕ್ತರು ಪಾಲುಗೊಂಡಿದ್ದು, ಅಂತಹ ಶ್ರದ್ಧಾಸಕ್ತರ ಒಂದು ಕಾರ್ಯತಂಡವೇ ಅವರೊಂದಿಗಿದೆ.

ವಚನ ಸಾಹಿತ್ಯದ ಡಿಜಿಟಲೀಕರಣ ಮತ್ತು ದಾಖಲೀಕರಣ ಕಾರ್ಯಕ್ಕೆ ಒಂದು ಸಾಂಸ್ಥಿಕ ವ್ಯವಸ್ಥೆ ಇರಬೇಕೆಂಬ ಆಶಯದಿಂದ ಅಶೋಕ ದೊಮ್ಮಲೂರು ಅವರು ಇತ್ತೀಚಿಗೆ ಸ್ಥಾಪಿಸಿರುವ **'ಇ-ಸಾಹಿತ್ಯ ದಾಖಲೀಕರಣ ವೇದಿಕೆ'**ಯ ಮೂಲಕ ಬಹುಮುಖ ಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆದಿದ್ದಾರೆ. ಅಂತಹ ಒಂದು ಯೋಜನೆ – ಅಪ್ರಕಟಿತ ಸಾಹಿತ್ಯದ ಪರಿಷ್ಕರಣೆ, ಪ್ರಕಟಣೆ ಮತ್ತು ಉಪಯುಕ್ತ ಸಾಹಿತ್ಯ ಕೃತಿಗಳ ಮರು ಪ್ರಕಟಣೆ.

ಆ ದಿಸೆಯಲ್ಲಿ ಸಮಗ್ರ ವಚನ ಸಂಪುಟಗಳನ್ನು ಪ್ರಕಟಿಸಿರುವ ಕರ್ನಾಟಕ ಸರ್ಕಾರದ ಅನುಮತಿ ಪಡೆದು, ಬೇರೆ-ಬೇರೆ ವಚನಕಾರರ ವಚನಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಪ್ರಕಟಿಸುವ ಉದ್ದೇಶದ ಅನುಷ್ಠಾನವೇ ಪ್ರಸ್ತುತ ಪ್ರಕಟಣೆಗಳು. ಇದರ ಆಶಯ ನಿರ್ದಿಷ್ಟ ವಚನಕಾರನ ವಚನಗಳ ಬಗಗೆ ಅಧ್ಯಯನ-ಸಂಶೋಧನೆ ನಡೆಸುವವರು ಮತ್ತು ಸಾಮಾನ್ಯ ಓದುಗರಿಗೆ ಸುಲಭ ಬೆಲೆಯಲ್ಲಿ ದೊರಕುವಂತಾಗಬೇಕು ಎನ್ನುವುದೇ ಆಗಿದೆ.

ಸ್ವತಃ ಸಂಗ್ರಾಹಕರೂ, ಸಂಪಾದಕರೂ ಆಗಿರುವ ಅಶೋಕ ದೊಮ್ಮಲೂರು ಅವರು ಇದುವರಿಗೆ ಪ್ರಕಟವಾಗಿರುವ ಬೇರೆ-ಬೇರೆ ವಚನಕಾರರ ವಚನಗಳೇ ಅಲ್ಲದೆ, ಸಹಸ್ರಾರು ಹೊಸ ವಚನಗಳನ್ನು ಪತ್ತೆ ಹಚ್ಚಿದ್ದಾರೆ. ಅದಕ್ಕೆ ಪ್ರಮಾಣವೆಂದರೆ, ಅವರು ಸಂಪಾದಿಸಿರುವ **"ಮಡಿವಾಳ ಮಾಚಿದೇವರ ವಚನಗಳು"**. ಈ ಸಂಗ್ರಹದಲ್ಲಿ ಸಮಗ್ರ ವಚನ ಸಂಪುಟಗಳಲ್ಲಿರುವ ಮಾಚಿದೇವರ ವಚನಗಳ ಜೊತೆಗೆ ಸುಮಾರು ೩೬೦ರಷ್ಟು ಹೆಚ್ಚುವರಿ ವಚನಗಳಿವೆ.

ಅಶೋಕ ದೊಮ್ಮಲೂರು ಅವರ **'ಇ–ಸಾಹಿತ್ಯ ದಾಖಲೀಕರಣ ವೇದಿಕೆ'**ಯ ಕಾರ್ಯ ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರ ಪ್ರಾಚೀನ ಸಾಹಿತ್ಯದ ಮಹತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈಗ ದೊರೆಯುವ ಎಲ್ಲ ಹಳೆಯ ಹಸ್ತಪ್ರತಿಗಳನ್ನೂ ಆಧುನಿಕ ತಂತ್ರಜ್ಞಾನದ ಮೂಲಕ ಡಿಜಿಟಲೀಕರಣ ಯೋಜನೆಯನ್ನು ಕೈಗೊಂಡಿರುವುದು ಸ್ವಾಗತಾರ್ಹ ಕ್ರಮ. ಈ ಮಹತ್ವದ ಯೋಜನೆಯ ಅನುಷ್ಠಾನದಲ್ಲಿ, ಈಗಾಗಲೇ ಈ ಕ್ಷೇತ್ರದಲ್ಲಿ ಗಣನೀಯ ಕಾರ್ಯ ಮಾಡಿರುವ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಅನುಭವವಿರುವ ಅಶೋಕ ದೊಮ್ಮಲೂರು ಅವರ ಇ–ಸಾಹಿತ್ಯ ದಾಖಲೀಕರಣ ವೇದಿಕೆಯ ಸೇವೆಯನ್ನು ಬಳಸಿಕೊಳ್ಳುವ ಬಗೆಗೆ ಸರ್ಕಾರ ವಿಚಾರ ಮಾಡಬಹುದು.

ನಾಡಿನ ಸಾಹಿತ್ಯ ಕ್ಷೇತ್ರದ ಬಹುತೇಕ ವಿದ್ವಾಂಸರು ಮತ್ತು ಕ್ಷೇತ್ರತಜ್ಞರೊಡನೆ ನಿಕಟ ಸಂಪರ್ಕ ಹೊಂದಿರುವ ಅಶೋಕ ದೊಮ್ಮಲೂರು ಅವರು ತಮ್ಮ ಇ–ಸಾಹಿತ್ಯ ದಾಖಲೀಕರಣ ವೇದಿಕೆಯ ವತಿಯಿಂದ ಆರಂಭಿಸಿರುವ ಬಿಡಿ ಬಿಡಿ ವಚನ ಸಂಗ್ರಹದ ಈ ಪ್ರಕಟಣಾ ಯೋಜನೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ನಿರ್ದಿಷ್ಟ ವಚನಕಾರರ ವಚನಗಳನ್ನು ಕುರಿತಂತೆಯೇ ವಿಶೇಷ ಅಧ್ಯಯನ–ಸಂಶೋಧನೆ ನಡೆಸುವವರಿಗೆ ಮಾತ್ರವಲ್ಲದೆ ಸಾಮಾನ್ಯ ಓದುಗರಿಗೂ ಈ ಪ್ರಕಟಣೆಗಳು ದೊರಕುವಂತಾಗಿರುವುದು ಹರ್ಷದ ಸಂಗತಿ.

ಇಂತಹ ಉಪಯುಕ್ತ ಕಾರ್ಯಕ್ಕೆ ಅಶೋಕ ದೊಮ್ಮಲೂರು ಅವರ ಇ–ಸಾಹಿತ್ಯ ದಾಖಲೀಕರಣ ವೇದಿಕೆಗೆ ನನ್ನ ಅಭಿನಂದನೆಗಳು.

ಬೆಂಗಳೂರು **– ಗೊ.ರು. ಚನ್ನಬಸಪ್ಪ**

೧–೧–೨೦೨೬

ಶರಣರ ದಾರಿಗೆ ಮರಣವಿಲ್ಲ....

ಮೂಲ ವಚನಗಳು – ಛಾಯಾ ರಚನೆಗಳು

ವಚನಗಳು ಎಂದರೆ ಅವು ಹನ್ನೆರಡನೆಯ ಶತಮಾನದ ಶರಣ ಚಳವಳಿಯ ಉಪ ಉತ್ಪನ್ನದ ರಚನೆಗಳು, ಅವುಗಳನ್ನು ಮಾತ್ರ ವಚನಗಳೆಂದು ಕರೆಯುವುದು ಹೆಚ್ಚು ಸೂಕ್ತವಾಗುತ್ತದೆ. ಕಾರಣ ಅವು ಚಳವಳಿಯಲ್ಲಿ ತೊಡಗಿದ ಎಲ್ಲ ಶರಣರ ಸಂವಾದಾತ್ಮಕ ರಚನೆಗಳು ಆತ್ಮಗತ ಶೈಲಿಯ ರಚನೆಗಳಿದ್ದೂ, ಅಲ್ಲಿ ತನಗೆ ತಾನೇ ನಿವೇದಿಸುವ ಗುಣಕ್ಕಿಂತ ಚಳವಳಿಯ ಮೂಲ ಆಶಯಗಳನ್ನು ಕುರಿತಂತೆ ಶರಣ ಸಂದೋಹಕ್ಕೆ ಒಪ್ಪಿಸುವ – ವಿಶ್ಲೇಷಿಸುವ ಭಾವ ವಿಶೇಷತೆಯಿಂದ ಕೂಡಿದೆ. ಹೀಗಾಗಿ ಆ ಕಾಲಮಾನದ ಎಲ್ಲ ರಚನೆಗಳ ಆಂತರ್ಯದಲ್ಲಿ ಚಳವಳಿಯೊಂದರ ಉಸಿರು ಪ್ರಾಣ ದ್ರವ್ಯವಾಗಿ ಜಂಗಮ ಶೀಲವಾಗಿರುವುದನ್ನು ಕಾಣಬಹುದು.

ಹನ್ನೆರಡನೇ ಶತಮಾನದ ನಂತರದಲ್ಲಿ ರಚಿತವಾಗಿರುವ ಯಾವುದೇ ವಚನಗಳಿಗೂ ಈ ಗುಣ ಶಕ್ತಿ ಇಲ್ಲ. ಆದ್ದರಿಂದಲೇ ಅವುಗಳನ್ನು ಹನ್ನೆರಡನೇ ಶತಮಾನದ ವಚನಗಳಿಗೆ ಹೋಲಿಸುವುದಾಗಲೀ ವಚನಗಳೆಂದು ಕರೆಯುವುದಾಗಲಿ ಅಷ್ಟು ಸಾಧುವಲ್ಲ. ಕಾರಣ ಇವು ವ್ಯಕ್ತಿಯ ವೈಯುಕ್ತಿಕ ನೆಲೆಯ ರಚನೆಗಳು. ಅವನ ವ್ಯಕ್ತಿಗತ ಕೇಂದ್ರದಲ್ಲಿ ರಚಿತವಾದವು. ಅವುಗಳಲ್ಲಿ ಹನ್ನೆರಡನೇ ಶತಮಾನದ ಚಳುವಳಿಯ ಸ್ಪರ್ಶತೆಯನ್ನು ಕಾಣಲಾಗುವುದಿಲ್ಲ. ಇವು ಏನಿದ್ದರೂ ಹನ್ನೆರಡನೇ ಶತಮಾನದ ವಚನಗಳನ್ನು ಅನುಕರಿಸಿದಂತೆ ಬರೆದ ವ್ಯಕ್ತಿಗತ ಮೂಡಿಕೆಗಳು. ಆದ್ದರಿಂದ ಇವು ವಚನಗಳ ಛಾಯಾ ರಚನೆಗಳೆನ್ನಬಹುದು.

ಧಾರ್ಮಿಕ ಪಠ್ಯಗಳು

ಹನ್ನೆರಡನೇ ಶತಮಾನದ ಚಳವಳಿಯ ಕಂಪನ ಹೇಗಿತ್ತೆಂದರೆ ಯಾವ ವಚನಕಾರನೂ ಆ ಸಂಘಟನಾ ಶಕ್ತಿಯ ಪ್ರಭಾವದಿಂದ ಹೊರಗಿರಲು ಸಾಧ್ಯವಿರಲಿಲ್ಲ. ಅವರು ಕಲ್ಯಾಣಕ್ಕೆ ಬಂದಿರಲಿ ಅಥವಾ ಬಾರದಿರಲಿ, ಅವರು ಚಳವಳಿಯ ಭಾಗವಾಗಿ ಇದ್ದಂತೆ ಸ್ಪಂದಿಸಿದ್ದಾರೆ. ವಚನ ರಚನೆ ಮಾಡಿದ್ದಾರೆ.

ಆ ಕಾಲ ಸಂದರ್ಭದ ಎಲ್ಲ ವಚನಗಳಲ್ಲೂ ಆ ಚಳವಳಿಯ ಕಾವು ಉಸಿರಾಗಿದೆ. ವ್ಯಕ್ತಿಗತ ಹಾಗೂ ಲೋಕಗತ ಎಂಬ ಫರಕನ್ನು ಕಳೆದುಕೊಂಡ ಪರಿಯಲ್ಲಿ ಆತ್ಮ ನಿರೀಕ್ಷಣಾ ಗುಣ ವಿವೇಕದಲ್ಲಿ ಧರ್ಮದ ಶೋಧ ಅರ್ಥಾತ್ ಜೀವನ ಧರ್ಮದ ಶೋಧ ವಚನಗಳ ಪ್ರಾಣದ್ರವ್ಯವಾಗಿದೆ. ಈ ಇಂಥ ಅನುಭವ ವಿಶೇಷ. ಆ ನಂತರದ ಕಾಲಮಾನದ ಯಾವುದೇ ಯಾರದೇ ರಚನೆಗಳಲ್ಲಿ ಕಾಣಬರುವುದು ಸಾಧ್ಯವಿಲ್ಲ.

ಶರಣ ಚಳವಳಿಯಲ್ಲಿ ತೊಡಗಿಸಿ ಕೊಂಡವರು ಒಂದು ವರ್ಣದವರಲ್ಲ, ಒಂದು ವರ್ಗದವರಲ್ಲ. ಚಾತುರ್ವರ್ಣ ವ್ಯವಸ್ಥೆಯ ಕಕ್ಷೆಯಲ್ಲಿರುವ ಸಮುದಾಯ ಮೂಲಗಳೆಲ್ಲವೂ ತಮ್ಮ ತಮ್ಮ ಅರಿಮೆಗಳನ್ನು ಕಳೆದುಕೊಂಡು ಚಳವಳಿಯ ಮುಖ್ಯ ವಾಹಿನಿಗೆ ಬಂದದ್ದು ವಿಶೇಷ.

ಚಾತುರ್ವರ್ಣ ವ್ಯವಸ್ಥೆಯಿಂದ ಹೊರಗಿದ್ದ ಅಸ್ಪೃಶ್ಯ ಅರ್ಥಾತ್ ಪಂಚಮ ಸಮುದಾಯಗಳು ಕೂಡ ಇಲ್ಲಿ ಚಳವಳಿಯ ಮುಖ್ಯ ಭಾಗವಾಗಿವೆ. ಹೀಗಾಗಿ ವಿಭಿನ್ನ ಮನೋಧರ್ಮದವರು ಹಲವು ಬಗೆಯ ನರಳುವಿಕೆಯಲ್ಲಿ ನೋವುಂಡ ಜೀವಿಗಳೆಲ್ಲ ಸಂಘಟಿತವಾಗಿ ಕಟ್ಟಿದ ಚಳವಳಿ ಇದಾಗಿದ್ದರಿಂದ ಇವು ಕೇವಲ ಸಾಹಿತ್ಯದ ಪಠ್ಯಗಳಲ್ಲ; ಇವು ಚಳವಳಿಯ ಪಠ್ಯಗಳು, ಚಳವಳಿಯ ಮೂಲ ಸ್ರೋತವಾದ ಲಿಂಗಾಯತ ಧರ್ಮದ ಪಠ್ಯಗಳು.

ಅರಿವೇ ಗುರು

ಇದೊಂದು ಪರಿಯಲ್ಲಿ ಪ್ರಜಾಸತ್ತಾತ್ಮಕ ಮಾದರಿಯಲ್ಲಿ ಸಂಪಾದಿಸಿ ಕಟ್ಟಿದ ಧರ್ಮವಾಗಿದೆ. ಇದರ ಪಠ್ಯ ರೂಪದ ವಚನಗಳಲ್ಲಿಯೂ ಸಹ ಇದೇ ಪ್ರಜಾಸತ್ತಾತ್ಮಕ ಗುಣದ ವಿಚಾರ ಶೀಲತೆಯಿದೆ. ಅನ್ಯಧರ್ಮದ ಪಠ್ಯಗಳು ಹೆಚ್ಚಿನದಾಗಿ ಏಕವ್ಯಕ್ತಿ ಪ್ರಣೀತವಾಗಿದ್ದರೆ ವಚನಗಳು ಹಾಗಲ್ಲ; ಬಹುತ್ವವೇ ಅದರ ಜೀವಾಳ. ಬಹುತ್ವದ ನೆಲೆಯಲ್ಲಿ ಶೋಧನೆಗೆ ಒಡ್ಡಿಕೊಂಡು ಸಂವಾದ ಗುಣ ಫಲಿತವಾಗಿ ಒಡಮೂಡಿದ ಸರ್ವಮಾನ್ಯ ಸಂವೇದ್ಯವಾದ ಅರಿವೇ ಇಲ್ಲಿ ಗುರುವಾಗಿದೆ. ಅಂಥ ಅರಿವಿನ ಗುರು ಪ್ರಣೀತ ಧರ್ಮ ಇದಾಗಿದೆ. ಹೀಗಾಗಿ ವಚನಗಳೆಂದರೆ ಕೇವಲ ಪದಗಳಲ್ಲ, ಮಾತುಗಳಲ್ಲ, ಅವು ಮಾತಿನ ರೂಪದ ಜ್ಯೋತಿರ್ಲಿಂಗಗಳು. ಅರಿವೇ ಗುರುವಾದ ಗುರು ಬೋಧೆಗಳು.

ವಚನಗಳ ಸಂಪಾದನೆ

ಹನ್ನೆರಡನೆ ಶತಮಾನದ ವಚನ ಸಂಪತ್ತು ನಮಗೆ ಸಿಕ್ಕಿರುವುದು ಸ್ವಲ್ಪ, ಸುಟ್ಟು ಹಾಕಿದಂತೆ ನಾಶವಾಗಿರುವುದು ಅಪಾರ. ಅಂಥದ್ದರ ನಡುವೆಯೂ ಇನ್ನೂ ಕತ್ತಲಲ್ಲಿರುವುದು ಅಲ್ಪಸ್ವಲ್ಪ. ಇವುಗಳನ್ನು ಶೋಧಿಸುವ ಕಾರ್ಯದಲ್ಲಿ ಮಿತ್ರರಾದ ಅಶೋಕ ದೊಮ್ಮಲೂರು ಅವರು ಕಾಯಕ ತತ್ಪರತೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಈಗ ಲಭ್ಯವಿರುವ ವಚನ ಸಂಪತ್ತು ಪ್ರಾತಃಸ್ಮರಣೀಯರಾದ ಗೌರವಾನ್ವಿತ ಡಾ. ಫ.ಗು. ಹಳಕಟ್ಟಿಯವರ ಪರಿಶ್ರಮದ ಫಲ. ಅವರ ಶೋಧನೆಯ ಸಂಪಾದನೆಯ ಕಾರಣದಿಂದಾಗಿ ಈ ಅತ್ಯಮೂಲ್ಯ ವಚನ ಸಂಪತ್ತು ಕನ್ನಡ–ಕನ್ನಡಿಗ–ಕರ್ನಾಟಕದ ಹಿರಿಮೆ–ಗರಿಮೆಯನ್ನು ಹೆಚ್ಚಿಸಿದೆ.

ವಚನಗಳ ಅಧ್ಯಯನವೆಂದರೆ ಅದು ಸಾಹಿತ್ಯಿಕ ಅಧ್ಯಯನವಲ್ಲ. ಕೇವಲ ಸಾಹಿತ್ಯದೃಷ್ಟಿಯಲ್ಲಿ ಅವುಗಳ ರಚನೆಯನ್ನು ಕುರಿತು ಭಜನೆಗೆ ತೊಡಗಿದರೆ ಅದು

ಇಡೀ ಚಳವಳಿಗೆ ಮಾಡುವ ದ್ರೋಹವಾಗುತ್ತದೆ. ಕಾರಣ ವಚನಗಳ ಆಂತರ್ಯದಲ್ಲಿ ಈಗಲೂ ಚಳವಳಿ ಜೀವಂತವಾಗಿದೆ. ಆ ಚಳವಳಿಯನ್ನು ನಮ್ಮೆದೆಗೆ ತಂದುಕೊಂಡಾಗ ಮಾತ್ರ, ನಮ್ಮ ಸಮಕಾಲೀನ ಸಂದರ್ಭದ ಹಲವು ಸಾಮಾಜಿಕ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ರೋಗಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಸಾಧ್ಯತೆ ಇದೆ. ನಮ್ಮ ನಡುವೆ ಮತ್ತೆ ಕಲ್ಯಾಣವನ್ನು ಕಟ್ಟುವ ಸಾಧ್ಯತೆ ಇದೆ. ಸಮಸಮಾಜ ಸರ್ವೋದಯಗಳ ಆಶಯವನ್ನು ಆಗು ಮಾಡುವ ಸಾಧ್ಯತೆ ಇದೆ. ಇಂಥ ಹಲವು ಬಗೆಯ ಸಾಧ್ಯತೆಗಳ ಸಾಧನಾರೂಪಿಗಳು ವಚನಗಳು.

ಇಂಥ ವಚನಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪ್ರತಿ ಮನೆಗೂ ಪ್ರತಿ ಮನಗಳಿಗೂ ಮುಟ್ಟಿಸುವ ಹಿರಿಯಾಸೆ ಹೊತ್ತು ಕಾರ್ಯತತ್ಪರರಾಗಿರುವ ಶರಣ ಅಶೋಕ ದೊಮ್ಮಲೂರು ಅವರ ಈ ಕಾಯಕ ಸತ್ಯಶುದ್ಧ ಕಾಯಕ. ಈ ಕಾಯಕಕ್ಕೆ ದಾಸೋಹ ಗುಣವಿದೆ. ಈ ಅರಿವಿನ ದಾಸೋಹ ಶರಣರ ದಾರಿಯಲ್ಲಿ ನಡೆದಿದ್ದು ಶರಣರ ದಾರಿಗೆ ಮರಣವಿಲ್ಲ.

– ಎಸ್.ಜಿ. ಸಿದ್ಧರಾಮಯ್ಯ

ಆಶಯ ನುಡಿ

೧೨ನೇ ಶತಮಾನದ ವಚನಗಳು ಮಾತ್ರ ಅನುಭವಜನ್ಯ ವಚನ–ಗಳಾಗಿವೆ. ಬಹುಪಾಲು ಕಾಯಕಜೀವಿಗಳು ತಮ್ಮ ಕಾಯಕಗಳ ಅನುಭವದ ಮೂಲಕ ಪಡೆದ ಅನುಭಾವದ ಆಧಾರದ ಮೇಲೆ ಆ ವಚನಗಳನ್ನು ಬರೆದಿದ್ದಾರೆ. ಕಾಯಕ ಜೀವಿಗಳೆಲ್ಲ ಅಸ್ಪೃಶ್ಯ ಮತ್ತು ಹಿಂದುಳಿದ ಜನಾಂಗಗಳಿಗೆ ಸೇರಿದವರು. ಶೈವ ಬ್ರಾಹ್ಮಣ ಕುಲದಲ್ಲಿ ಜನಿಸಿದ ಬಸವಣ್ಣನವರು ವರ್ಣವ್ಯವಸ್ಥೆ –ಯನ್ನು ವಿರೋಧಿಸಿ ಕಾಯಕಜೀವಿಗಳ ಜೊತೆ ಒಂದಾದರು. ಅವರ ಜೊತೆ ಅನೇಕ ಸವರ್ಣೀಯರು ಶರಣ ಶರಣೆಯರಾಗಿ ಶರಣಸಂಕುಲವೆಂಬ ಸಮತಾ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದರು.

ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲದ ನವಸಮಾಜವನ್ನು ಮನುವಾದಿಗಳು ಸಹಿಸಲಿಲ್ಲ. ಆಳುವವರ ಶಸ್ತ್ರಗಳು ವೈದಿಕರ ಶಾಸ್ತ್ರಗಳ ಆದೇಶ ಪಾಲಿಸಿದವು. ಶರಣರ ಸಾವು ನೋವುಗಳು ಸಂಭವಿಸಿದವು. ಸಮಾನತೆ ಸಾರುವ ವಚನಕಟ್ಟುಗಳನ್ನು ಯಥಾಸ್ಥಿತಿವಾದಿಗಳು ಸುಟ್ಟರು. ಕಲ್ಯಾಣ ಹಾಳಾಯಿತು.

ಬದುಕುಳಿದ ಶರಣರು ದಿಕ್ಕಾಪಾಲಾಗಿ ಹೋದರು. ಕೆಲ ಶರಣರು ಅಳಿದುಳಿದ ವಚನಕಟ್ಟುಗಳ ರಕ್ಷಣೆಗಾಗಿ ಉಳವಿಯುತ್ತ ಹೊರಟರು. ಹೀಗೆ ಶರಣರು ರಕ್ಷಿಸಿದ ವಚನಗಳು ೧೫ನೇ ಶತಮಾನದವರೆಗೆ ಅಜ್ಞಾತವಾಗೇ ಉಳಿದವು.

೧೫ನೇ ಶತಮಾನದಲ್ಲಿ ವಿಜಯನಗರದ ಅರಸು ಪ್ರೌಢದೇವರಾಯನ ಕಾಲದಲ್ಲಿ ವಚನಗಳು ಬೆಳಕಿಗೆ ಬಂದವು. ಅಂದಿನಿಂದ ಮುಂದಿನ ಶತಮಾನ –ಗಳಲ್ಲಿ ಅವುಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳಲಾಯಿತು. ಶರಣರ ಕ್ರಾಂತಿಯ ಮೂಲ ಉದ್ದೇಶ ಮರೆಮಾಚಿ ಆನುಭಾವಿಕ ಚಿಂತನೆ –ಗಳನ್ನು ಮುಂದಕ್ಕೆ ತರಲಾಯಿತು. ಅದಕ್ಕಾಗಿ ಪ್ರಕ್ಷಿಪ್ತ ವಚನಗಳನ್ನೂ ಹುಟ್ಟು–ಹಾಕಲಾಯಿತು. ನಂತರ ಬಂದ ವಚನಕಾರರಲ್ಲಿ ಒಬ್ಬರೂ ಕಾಯಕಜೀವಿಗಳಿಲ್ಲ!

ವಚನಗಳ ಶುದ್ಧೀಕರಣ ಮತ್ತು ೨೧ನೇ ಶತಮಾನಕ್ಕೆ ಅನ್ವಯವಾಗು –ವಂಥ ವಚನಗಳ ಸಂಕಲನ ತುರ್ತು ಅವಶ್ಯಕತೆ ಆಗಿದೆ.

– ರಂಜಾನ್ ದರ್ಗಾ

ಪ್ರಕಾಶಕರ ನುಡಿ

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ೧೯೯೩ರಲ್ಲಿ ಡಾ. ಎಂ.ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನ ಸಾಹಿತ್ಯದ **'ಜನಪ್ರಿಯ ಆವೃತ್ತಿ'** ಪ್ರಕಟಣೆಯ ಬೃಹತ್ ಯೋಜನೆಯಡಿ ಏಕಕಾಲದಲ್ಲಿ ೧೫ ಸಂಪುಟಗಳನ್ನು ಪ್ರಕಟಿಸಿತು. ಈ ಸಂಪುಟಗಳು ನಂತರ ೨೦೦೧, ೨೦೧೬ ಹಾಗೂ ೨೦೨೧ರಲ್ಲಿ ಮರುಮುದ್ರಣಗೊಂಡಿವೆ. ೨೦೨೧ರ ಆವೃತ್ತಿಯ ಸಮಗ್ರ ವಚನ ಸಾಹಿತ್ಯ ಸಂಪುಟ–೭ (ಸಂಕೀರ್ಣ–೨)ರಲ್ಲಿ ಒಳಗೊಂಡಿರುವ ಜೇಡರ ದಾಸಿಮಯ್ಯನವರ ವಚನಗಳನ್ನು ಪ್ರತ್ಯೇಕಿಸಿ, **'ಆದ್ಯ ವಚನಕಾರ ಜೇಡರ ದಾಸಿಮಯ್ಯನವರ ವಚನಗಳು'** ಎಂಬ ಶೀರ್ಷಿಕೆಯಲ್ಲಿ ಈ ಗ್ರಂಥವನ್ನು ಪ್ರಕಟಿಸುತ್ತಿದ್ದೇವೆ.

ಶರಣರ ವಚನ ಸಾಹಿತ್ಯವನ್ನು ದಾಸೋಹಿಗಳ ಸಹಕಾರದೊಂದಿಗೆ ಪ್ರಕಟಿಸುವ ಕಾರ್ಯವನ್ನು ಇ–ಸಾಹಿತ್ಯ ಸಂಸ್ಥೆ ಕೈಗೊಂಡಿದೆ. ಈ ಗ್ರಂಥದ ಮುಖಬೆಲೆ ರೂ.೪೯/– ಆಗಿದೆ. ಶರಣಾಭಿಮಾನಿಗಳು ಕನಿಷ್ಠ ೨೫ ಪ್ರತಿಗಳನ್ನು ಖರೀದಿಸಿದಲ್ಲಿ, ಪ್ರತಿಗೆ ರೂ.೨೦/– ದರದಲ್ಲಿ ಲಭ್ಯವಾಗುತ್ತದೆ. ಈ ಗ್ರಂಥವು ಹೆಚ್ಚಿನ ಜನರಿಗೆ ತಲುಪುವ ಮೂಲಕ ಶರಣರ ತತ್ವಸಿದ್ಧಾಂತಗಳು ವಿಶ್ವದಾದ್ಯಂತ ವ್ಯಾಪಿಸಿ, ವಚನಸಾಹಿತ್ಯ ಮನೆಮನೆಗಳಲ್ಲಿ ಬೆಳಗಲಿ ಎಂಬುದು ನಮ್ಮ ವಿನಮ್ರ ಆಶಯ.

ಸಮಗ್ರ ವಚನ ಸಂಪುಟಗಳಲ್ಲಿರುವ ಶರಣರ ವಚನಗಳನ್ನು ಪ್ರತ್ಯೇಕವಾಗಿ ಮುದ್ರಣ ಮಾಡಲು ಅನುಮತಿ ನೀಡಿದ ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆಧನ್ಯವಾದಗಳು. ಈ ಗ್ರಂಥಕ್ಕೆ ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರ ಹಾರೈಕೆ ನುಡಿ, ಡಾ. ಎಸ್. ವಿದ್ಯಾಶಂಕರ ಅವರ ಪ್ರಸ್ತಾವನೆ, ಪ್ರೊ. ಎಸ್.ಜಿ. ಸಿದ್ದರಾಮಯ್ಯ ಹಾಗೂ ಶರಣ ಶ್ರೀ ರಂಜಾನ್ ದರ್ಗಾ ಅವರ ಆಶಯ ನುಡಿ, ಮತ್ತು ಡಾ. ವೀರಣ್ಣ ರಾಜೂರ ಅವರ ಬೆನ್ನುಡಿಯಿದೆ. ಈ ಎಲ್ಲಾ ನುಡಿಗಳನ್ನು ಬರೆದು ಕೊಟ್ಟ ಎಲ್ಲಾ ಮಹನೀಯರಿಗೆ ಹೃತ್ಪೂರ್ವಕಧನ್ಯವಾದಗಳು.

ಇ–ಸಾಹಿತ್ಯ ಸಂಸ್ಥೆಯು ಶರಣರ ಕ್ಷೇತ್ರಕಾರ್ಯ ಸಂಶೋಧನೆಯೊಂದಿಗೆ, ಇದುವರೆಗೆ ಸುಮಾರು ೫೫ ಲಕ್ಷ ಕನ್ನಡ ಭಾಷೆಯ ತಾಡೋಲೆ ಗರಿಗಳ ಸಂರಕ್ಷಣೆ ಹಾಗೂ ಡಿಜಿಟಲೀಕರಣವನ್ನು ಮಾಡಿದ್ದೂ, ಪ್ರತಿದಿನ ಸುಮಾರು ಹತ್ತು ಸಾವಿರ ತಾಡೋಲೆಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಈ ಮಹತ್ತರ ಯೋಜನೆಯೊಂದಿಗೆ ಲಾಭರಹಿತವಾಗಿ ಗ್ರಂಥಗಳನ್ನು ಮುದ್ರಿಸುವ ಕಾರ್ಯವನ್ನೂ ಕೈಗೊಂಡಿದ್ದೇವೆ. ಈ ಪುಣ್ಯಕಾರ್ಯಕ್ಕೆ ಎಲ್ಲರ ಸಹಕಾರ ಲಭಿಸಲಿ ಎಂದು ವಿನಮ್ರವಾಗಿ ಕೋರುತ್ತೇವೆ.

ಈ ಗ್ರಂಥದ ಅಕ್ಷರ ಜೋಡಣೆ ಹಾಗೂ ಮುಖಪುಟ ವಿನ್ಯಾಸವನ್ನು ನಿರ್ವಹಿಸಿರುವ ನಮ್ಮ ಸಂಸ್ಥೆಯ ನಿರ್ದೇಶಕರಾದ ಅಶೋಕ ದೊಮ್ಮಲೂರು ಅವರು, ತಮ್ಮ ಮಾತೃಶ್ರೀ ಲಕ್ಷ್ಮಮ್ಮ ಕೃಷ್ಣಪ್ಪ ಅವರ ಸ್ಮರಣಾರ್ಥವಾಗಿ ಈ ಗ್ರಂಥದ ದಾಸೋಹವನ್ನು ಸಲ್ಲಿಸಿರುವುದು ಶ್ಲಾಘನೀಯವಾಗಿದೆ. ಈ ಗ್ರಂಥವನ್ನು ಅಂದವಾಗಿ, ಲಾಭರಹಿತವಾಗಿ ಮುದ್ರಣ ಮಾಡಿಕೊಟ್ಟ ಸತ್ಯಶ್ರೀ ಮುದ್ರಣಾಲಯದ ಶ್ರೀ ಎಲ್. ಲಿಂಗಪ್ಪ ಹಾಗೂ ಅವರ ಸಿಬ್ಬಂದಿಗಳಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಜೇಡರ ದಾಸಿಮಯ್ಯನವರ ವಚನಗಳು ಓದುಗರಲ್ಲಿ ಆತ್ಮಪರಿಶೀಲನೆ, ಸಮಾನತೆಯ ಮನೋಭಾವ, ಜೀವನದಲ್ಲಿ ಬೆಳಕನ್ನು ತುಂಬಿ, ಆಧ್ಯಾತ್ಮಿಕ ಯಾತ್ರೆಗೆ ದಿಕ್ಸೂಚಿಯಾಗಲಿ ಎಂಬ ಆಶಯದೊಂದಿಗೆ ಈ ಗ್ರಂಥವನ್ನು ಪ್ರಕಟಿಸುತ್ತಿದ್ದೇವೆ. ನಮಗೆ ನಿರಂತರವಾಗಿ ಸಲಹೆ, ಮಾರ್ಗದರ್ಶನ ನೀಡುತ್ತಿರುವ ಎಲ್ಲ ಹಿತೈಷಿಗಳಿಗೆ ಭಕ್ತಿಪೂರ್ವಕ ಶರಣು-ಶರಣಾರ್ಥಿಗಳು.

೧೫-೦೩-೨೦೨೬ **ಪ್ರಕಾಶಕರು**

ಪ್ರಸ್ತಾವನೆ

ಜೇಡರ ದಾಸಿಮಯ್ಯ ಬಸವಣ್ಣನಿಗಿಂತ ಪೂರ್ವದಲ್ಲಿ ಇದ್ದ ಶರಣ. ಇವನು ಶಿವನಿಂದ ತವನಿಧಿಯನ್ನು ಪಡೆದು ದಾಸೋಹಂಭಾವದಿಂದಿರಲು ಇವನ ಅಹಂಕಾರವನ್ನು ಶಂಕರ ದಾಸಿಮಯ್ಯನು ಮುರಿದನಂತೆ! ಇವನು ಗುಲ್ಬರ್ಗ ಜಿಲ್ಲೆಯ ಮುದನೂರಿನವನು. ವೃತ್ತಿಯಲ್ಲಿ ನೇಯ್ಗೆಯವನು; ಮುದನೂರಿನ ರಾಮನಾಥನ ಭಕ್ತ. ಇವನ ಹೆಂಡತಿ ದುಗ್ಗಳೆ. "ಆರನೆಯ ವಿಕ್ರಮಾದಿತ್ಯನ (ಕ್ರಿ.ಶ.1076–1127) ತಮ್ಮ ಜಯಸಿಂಹ ಎಂಬಾತ ಕೆಲವು ಕಾಲವಾದರೂ ಕೊನೆಯ ಪಕ್ಷ 1082ರವರೆಗಾದರೂ ಬನವಾಸಿ ಮುಂತಾದ ಪ್ರಾಂತಗಳನ್ನು ಆಳುತ್ತಿದ್ದಂತೆ ಕಾಣುತ್ತದೆ. ಪ್ರಬಲನಾದ ಇವನನ್ನು ಒಬ್ಬ 'ರಾಜ' ಎಂದು ಈಚಿನವರು ಭಾವಿಸಿರಬಹುದು. ಇವನು ಎಂದೂ ಚಕ್ರವರ್ತಿಯಾಗಿ ಆಳಲಿಲ್ಲವೆಂಬುದೂ ನಿಜವೇ. ಆರನೆಯ ವಿಕ್ರಮಾದಿತ್ಯನ ಮೊಮ್ಮಗ ಜಗದೇಕಮಲ್ಲ ಎಂಬಾತ ಕ್ರಿ.ಶ.1139–49ರವರೆಗೆ ಆಳಿದ. ಜೇಡರ ದಾಸಿಮಯ್ಯ ಇವರಿಬ್ಬರ ಕಾಲದಲ್ಲಿಯೂ ಇದ್ದ ಎಂದಿಟ್ಟುಕೊಂಡರೆ ಆಗ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಕ್ರಿ.ಶ.1148ರ ಗೊಬ್ಬೂರು ಶಾಸನದಲ್ಲಿ ಬರುವ ಜೇಡರ ದಾಸಿಮಯ್ಯ ಇವನೇ ಆಗುತ್ತಾನೆ......" (ಡಾ. ಎಂ. ಚಿದಾನಂದಮೂರ್ತಿ: ವಚನ ಸಾಹಿತ್ಯ, ಪು.14). 'ದೇವರ ದಾಸಿಮಾರ್ಯರ ಕಥೆ' ಎಂಬ ಕೃತಿಯೊಂದಿರುವುದಾಗಿ ತಿಳಿದುಬಂದಿದೆ. ಅದರ ಆದಿಯ ಕಂದದಲ್ಲಿ "ಶಾಂಭವೀಶ ಮದ್ಗುರು............ ಗರಳಪುರೀಶ" ಎಂದಿದೆ (ನೋಡಿ: ಶಿವಾನುಭವ 34.6 (1960) ಪು.212–14; 34.7 (1960) ಪು.255–64).

ವಿದ್ವಾಂಸರು ತೀರ್ಮಾನಿಸಿರುವಂತೆ ದೇವರ ದಾಸಿಮಯ್ಯ ಮುದನೂರಿನವನೆಂಬುದಕ್ಕೆ ಪ್ರಾಚೀನ ಆಧಾರಗಳಿಲ್ಲ. ಅವನು ಆಂಧ್ರದ ಪೊಟ್ಟಲಕೆರೆಯಲ್ಲಿ (ಈಗಿನ ಪಾಟನ್ ಚೆರು) ಜಯಸಿಂಹನನ್ನು ಜೈನಧರ್ಮದಿಂದ ಶೈವಧರ್ಮಕ್ಕೆ ಮತಾಂತರಿಸಿದನು. ಅವನ ಕಾಲ ಸುಮಾರು 1040. ಅವನು ರಾಮನಾಥ ಅಂಕಿತದಲ್ಲಿ ವಚನಗಳನ್ನು ಬರೆದಿದ್ದ ಎಂಬುದಕ್ಕೆ ಎಲ್ಲೂ ಆಧಾರಗಳಿಲ್ಲ.

ದಾಖಲೆಗಳ ಪ್ರಕಾರ ಜೇಡರ ದಾಸಿಮಯ್ಯ ನಿಸ್ಸಂಶಯವಾಗಿ ಮುದನೂರಿನವನು (ಯಾದಗಿರಿ ಜಿಲ್ಲೆ ಹಾಗೂ ತಾಲ್ಲೂಕು). ಅಲ್ಲಿ ಅವನ ಇಷ್ಟದೈವ ಹಾಗೂ ವಚನಾಂಕಿತವಾದ ರಾಮನಾಥನ ದೇವಾಲಯವಿದೆ. ಅವನು ಬಸವಣ್ಣನವರಿಗಿಂತ ಸುಮಾರು ಇಪ್ಪತ್ತು ವರ್ಷ ಹಿಂದೆ ಇದ್ದವನು. ಅವನ ವಚನಗಳ ಓಲೆಕಟ್ಟಿನಲ್ಲಿ ಜೇಡರ ದಾಸಿಮಯ್ಯ ಎಂದಿರುವುದನ್ನು ಸಂಶೋಧಕ ಎಚ್. ದೇವೀರಪ್ಪನವರು ಗುರುತಿಸಿರುವರು. ಕರ್ನಾಟಕ ಸರ್ಕಾರವೇ ಹೊರತಂದಿರುವ

‘ಸಮಗ್ರ ವಚನ ಸಂಪುಟ–ಭಾಗ 2’ರಲ್ಲಿ ಅವನ 176 ವಚನಗಳನ್ನು ‘ಜೇಡರ ದಾಸಿಮಯ್ಯನ ವಚನಗಳು’ ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಿಸಿದೆ. ಅವನ ವಚನವೊಂದರಲ್ಲಿ ಜೇಡರ ಅಥವಾ ನೇಯ್ಗೆ ಕಾಯಕಕ್ಕೆ ಸಂಬಂಧಿಸಿದ ಉಂಕೆ, ಸರಿಗೆ, ಅಣಿಯೇಳು, ಲಾಳಿಯ ಮುಳ್ಳು ಮುಂತಾದ ವೃತ್ತಿಸಂಬಂಧಿತ ಪದಗಳು ಬಳಕೆಯಾಗಿರುವುದು ಅವನು ನೇಯ್ಗೆಯವನು ಎಂಬುದನ್ನು ದೃಢಪಡಿಸುತ್ತದೆ. ಬಸವಣ್ಣನವರ ಒಂದು ವಚನದಲ್ಲಿ ಜೇಡರ ದಾಸಿಮಯ್ಯ ಎನ್ನುವ ಪದ ಪ್ರಯೋಗವಾಗಿದೆ (ವ.475). ಉಳಿದ ಹದಿನಾಲ್ಕು ಕಡೆ ದಾಸ, ದಾಸಿದೇವ, ದಾಸಯ್ಯ, ದಾಸಿಮಯ್ಯ ಎಂಬ ಹೆಸರು ಬಳಕೆಯಾಗಿದೆ. ಇದು ಜೇಡರ ದಾಸಯ್ಯ ಎಂಬುದರ ಸಂಕ್ಷಿಪ್ತರೂಪ, ಸಂವಾದಿಪದ. ಬಸವಣ್ಣನವರ ವಚನಗಳಲ್ಲಿ, ಶಿವನು ಭಕ್ತನ ವೇಷ ಧರಿಸಿಬಂದು ಅವನ ಮನಸ್ಸನ್ನು ಒರೆಹಚ್ಚಿ ನೋಡಲು, ಅವನು ನೇಯ್ದು ಬೆಲೆಬಾಳುವ ವಸ್ತ್ರವನ್ನು ಅವನ ಇದಿರಿಗೇ ಹರಿದ ಪ್ರಸಂಗ ಬಂದಿದೆ. ಅವನ ದೃಢಮನಸ್ಸಿಗೆ ಮೆಚ್ಚಿದ ಶಿವ ಅವನ ಬಡತನವನ್ನು ನೀಗಿಸಲು ತವನಿಧಿಯನ್ನು ಅನುಗ್ರಹಿಸಿದ ಘಟನೆ ಬಸವಣ್ಣನವರ ಹಲವು ವಚನಗಳಲ್ಲಿ ಬಂದಿದೆ. ಬಸವಣ್ಣನವರು ದಾಸಿಮಯ್ಯ–ದುಗ್ಗಳೆಯರ ಅನುಪಮ ದಾಂಪತ್ಯವನ್ನು ಕೊಂಡಾಡಿದ್ದಾರೆ. ಒಂದು ವಚನದಲ್ಲಿ, ದಾಸ–ದುಗ್ಗಳೆಯಂತೆ ನಂಬಿಕೆಗೆ ಅರ್ಹನಾದಲ್ಲಿ ಶಿವನು ಅಂತಹ ಭಕ್ತನಿಗೆ ತನ್ನನ್ನೇ ಅರ್ಪಿಸಿಕೊಳ್ಳುವನು ಎಂದಿರುವರು (ವ.149). ಜೇಡರ ದಾಸಿಮಯ್ಯನಿಗೆ ಅನುರೂಪಳಾದ ಪತ್ನಿ ದುಗ್ಗಳೆ. ಅವಳ ಕೈಹಿಡಿದು ಬದುಕಿದೆನೆನ್ನುವ ಕೃತಾರ್ಥಭಾವ ಅವನದು. ಅವನು ತನ್ನ ಒಂದು ವಚನದಲ್ಲಿ ‘ಬಂದುದನರಿದು ಬಳಸುವಳು. ಬಂದುದ ಪರಿಣಾಮಿಸುವಳು. ಬಂಧು–ಬಳಗವ ಮರಸುವಳು. ದುಗ್ಗಳೆಯ ತಂದು ಬದುಕಿದೆನು ಕಾಣಾ! ರಾಮನಾಥ’ ಎಂದು ಹೃದಯತುಂಬಿ ಪತ್ನಿಯ ಗುಣಗಾನ ಮಾಡಿರುವನು. ಅವನು ತನ್ನ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡ ವಿಧಾನವನ್ನು ತಿಳಿಸುವ ಕತೆ ವೀರಶೈವ ಪುರಾಣ/ಕಾವ್ಯಗಳಲ್ಲಿ ಅರ್ಥವತ್ತಾಗಿ ನಿರೂಪಣೆಗೊಂಡಿದೆ.

ಒಮ್ಮೆ ಕೈಲಾಸದಲ್ಲಿ ಸಂನ್ಯಾಸ ಹೆಚ್ಚೋ ಸಂಸಾರ ಹೆಚ್ಚೋ ಎನ್ನುವ ಬಗೆಗೆ ಚರ್ಚೆಯಾಯಿತಂತೆ. ವಿಧಿಯು ಸಂನ್ಯಾಸವೇ ಶ್ರೇಷ್ಠವೆಂದರೆ, ವಿಷ್ಣು ಗೃಹಸ್ಥಾಶ್ರಮವೆ ಶ್ರೇಷ್ಠವೆಂದು ವಾದಿಸಿದನು. ಅವರ ವಾದ ಕೇಳಿದ ಶಿವನು, ಇದಕ್ಕೆ ಸರಿಯಾದ ತೀರ್ಪನ್ನು ಜೇಡರ ದಾಸಿಮಯ್ಯನಲ್ಲಿ ಪಡೆಯಿರಿ ಎಂದು ಭೂಲೋಕಕ್ಕೆ ಕಳುಹಿಸಿದನು. ಅವರು ದಾಸಿಮಯ್ಯನ ಬಳಿ ಬಂದು ತಮ್ಮ ಸಮಸ್ಯೆಗೆ ಪರಿಹಾರ ನೀಡು ಎಂದು ಕೇಳಿಕೊಳ್ಳುವರು. ದಾಸಿಮಯ್ಯ ನೆಯ್ಗೆ ಕಾಯಕ ನಡೆಯಿಸಿ ಅದರಿಂದ ಬಂದುದರಲ್ಲಿ ಪತ್ನಿ ದುಗ್ಗಳೆಯೊಂದಿಗೆ ತೃಪ್ತಿಯ ಜೀವನ ನಡೆಸಿದ್ದನು. ಬೆಳಗಿನ ವೇಳೆ ಮಗ್ಗದಲ್ಲಿ ಬಟ್ಟೆ ನೇಯುತ್ತಿದ್ದ ದಾಸಿಮಯ್ಯ ದುಗ್ಗಳೆಯನ್ನು ಕರೆದು ನೂಲಿನ ಎಳೆ ಹರಿದಿದೆ. ದೀಪ ತಾ ಎನ್ನುವನು. ಅವಳು ಮರುಮಾತಾಡದೆ ದೀಪ

ತರುವಳು. ದಾಸಿಮಯ್ಯನಿಗೆ ಹಸಿವಾಗಲು ತಂಗಳು ಅಂಬಲಿಯನ್ನು ಉಣ್ಣುತ್ತ ಪತ್ನಿಯನ್ನು ಕರೆದು 'ಬಿಸಿಯಾಯಿತು ಆರಿಸು' ಎನ್ನುವನು. ಅವಳು ಬಳಿಯಲ್ಲಿದ್ದ ಮೊರದಿಂದ ಗಾಳಿ ಬೀಸುವಳು. ಆಗ ದಾಸಿಮಯ್ಯ ವಿಧಿ ಹಾಗೂ ವಿಷ್ಣುವಿಗೆ, ಇವಳಂತಹ ಪತ್ನಿ ದೊರೆತಲ್ಲಿ ಸಂನ್ಯಾಸಕ್ಕಿಂತ ಸಂಸಾರ ಹೆಚ್ಚಲ್ಲವೆ? ಎಂದು ಹೇಳುವನು.

ಜೇಡರ ದಾಸಿಮಯ್ಯ ಜಾತಿಯಲ್ಲಿ ಉತ್ತಮನಲ್ಲ. ಆದರೂ ಅವನು ಮುದನೂರಿನ ರಾಮನಾಥನ ಪರಮ ಭಕ್ತ. ಒಮ್ಮೆ ದೇವಾಲಯದಲ್ಲಿ ರಾಮನಾಥನನ್ನು ಭಕ್ತಿಯಿಂದ ಪೂಜಿಸುತ್ತಿರಲು ಅದನ್ನು ನೋಡಿ ಸಹಿಸದ ಬ್ರಾಹ್ಮಣರು ಅವನನ್ನು ದೇವಾಲಯದಿಂದ ಹೊರಹಾಕುವರು. ಆಗ ರಾಮನಾಥನು ಮೂರು ದಿವಸ ದೇವಾಲಯದ ಬಾಗಿಲು ಮುಚ್ಚುವಂತೆ ಮಾಡುವನು. ಬ್ರಾಹ್ಮಣರು ಎಷ್ಟೇ ಪ್ರಯತ್ನಿಸಿದರೂ ಬಾಗಿಲು ತೆಗೆಯಲಾಗಲಿಲ್ಲ. ಅವರಿಗೆ ತಮ್ಮ ತಪ್ಪಿನ ಅರಿವಾಯಿತು. ಅವರು ದಾಸಿಮಯ್ಯನ ಬಳಿ ಬಂದು ಕ್ಷಮೆಯಾಚಿಸಿ ಬಾಗಿಲು ತೆಗೆಯುವಂತೆ ಮಾಡು ಎಂದು ಪ್ರಾರ್ಥಿಸುವರು. ದಾಸಿಮಯ್ಯ ರಾಮನಾಥನನ್ನು ಸ್ತುತಿಸಲು ದೇವಾಲಯದ ಬಾಗಿಲು ತೆರೆದುಕೊಂಡವು. ಈ ಪವಾಡವನ್ನು ಅಂಬಿಗರ ಚೌಡಯ್ಯ (1160) ತನ್ನ ವಚನದಲ್ಲಿ ಹೇಳಿರುವನು.

ಜೇಡರ ದಾಸಿಮಯ್ಯನು (ಸುಮಾರು 1140) ಸದ್ಯಕ್ಕೆ ಕನ್ನಡದ ಆದ್ಯ ವಚನಕಾರ. ಬಸವಣ್ಣನವರ ಅನೇಕ ವಚನಗಳ ಮೇಲೆ ಇವನ ವಚನಗಳ ಪ್ರಭಾವ ಆಗಿದೆ. ಇವನ ವಚನಗಳ ಮುಖ್ಯಗುಣ ಸಂಕ್ಷಿಪ್ತತೆ, ಸರಳತೆ ಹಾಗೂ ಅರ್ಥಪ್ರಚುರತೆ. ತನ್ನ ವಚನಗಳಲ್ಲಿನ ಸಾಹಿತ್ಯಕ ಗುಣ ಹಾಗೂ ಮೌಲ್ಯಗಳಿಂದಾಗಿ ತನ್ನ ಕಾಲದ ವಚನ ಸಾಹಿತ್ಯಕ್ಕೆ ಹೊಸ ಅಭಿವ್ಯಕ್ತಿ ವಿಧಾನವನ್ನೂ, ತಾಜಾತನದಿಂದ ಕೂಡಿದ ವಿಚಾರಪ್ರಣಾಲಿಯನ್ನೂ, ಜನವಾಣಿ ಹಾಗೂ ದೇಸಿ ಛಂದಸ್ಸಿಗೆ ಜೀವಶಕ್ತಿಯನ್ನು ಪರಿಚಯಿಸಿದವನೂ, ಶ್ರೇಷ್ಠ ಚಿಂತಕನೂ, ಅನುಭಾವಿಯೂ ಆಗಿ ತನ್ನ ವಿಶಿಷ್ಟ ಗುಣದಿಂದ ತನ್ನ ಮುಂದಿನವರಿಗೆ ಮಾರ್ಗದರ್ಶಿಯೂ ಆಗಿ ಕಾಣಿಸಿಕೊಂಡಿರುವನು. ಅವನು ಬಸವಣ್ಣನವರಿಗಿಂತ ಹಿಂದೆಯೇ ವರ್ಣಾಶ್ರಮಧರ್ಮ ಪದ್ಧತಿಯನ್ನು ಟೀಕಿಸಿದವನು. ಅವನು ತನ್ನ ಒಂದು ವಚನದಲ್ಲಿ ಸಾಮಾಜಿಕ ನಿಷಿದ್ಧವಾದ ಹೊಲೆಯರ ಬಾವಿಯ ಪ್ರಸ್ತಾಪ ಮಾಡಿರುವನು. ಸಾಮಾಜಿಕ ವ್ಯವಸ್ಥೆಯಲ್ಲಿ ಉತ್ತಮರು ಬಳಸುವ ಬಾವಿ, ಅಂತ್ಯಜರು ಬಳಸುವ ಬಾವಿ ಎಂದು ಭೇದವಿದ್ದುದನ್ನು ವಿಡಂಬಿಸುತ್ತ ಅಂತ್ಯಜರ ಬಾವಿಗೆ ಎಲುಬು ನೇತುಹಾಕುವ ಮೂಲಕ ಸಾಂಕೇತಿಕವಾಗಿ ಉತ್ತಮರು ಆ ಬಾವಿಯಲ್ಲಿನ ನೀರನ್ನು ಬಳಸಬಾರದೆಂದು ಎಚ್ಚರಿಸುವ ಅವರ ಕ್ರೌರ್ಯವನ್ನು ಟೀಕಿಸುವನು. ಮನುಷ್ಯನ ಬಾಯಲ್ಲಿ ಪ್ರಕೃತಿನಿರ್ಮಿತ ಹಲ್ಲುಗಳ ಜೋಡಣೆ ಇದೆ. ಇಂತಹ ಎಲುಬುಗಳಿಂದ ಕೂಡಿದ ಬಾಯಲ್ಲಿ ಉತ್ತಮರು ಪ್ರೀತಿಯ ಮಾತುಗಳನ್ನಾಡುವವರು. ಹೀಗಾಗಿ ಇವರು ಉತ್ತಮರು ಹೇಗಾಗುವರು? ಎಂದು ಪ್ರಶ್ನಿಸುವನು. 'ಮಡದಿಯ ಪ್ರಾಣಕ್ಕೆ

ಮೊಲೆ ಮುಡಿ ಇದ್ದಿತ್ತೆ? ಒಡೆಯುನ (=ಉತ್ತಮನ) ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?' ಎನ್ನುವ ಪ್ರಖರ ವೈಚಾರಿಕ ಚಿಂತನೆಯು ಸಾಮಾಜಿಕ ಆಚರಣೆಯಾದ ವರ್ಣಾಶ್ರಮಧರ್ಮವನ್ನು ಕಟುವಾಗಿ ಟೀಕಿಸುವ ರೀತಿಯಲ್ಲಿದೆ.

ದಾಸಿಮಯ್ಯ ಒಬ್ಬ ಸಾಮಾನ್ಯ ನೇಕಾರನಾಗಿರಲಿಲ್ಲ. ಅವನ ವಚನಗಳಲ್ಲಿ ವರ್ತಮಾನದ ಬದುಕು, ಅದರ ಸಂಕೀರ್ಣತೆ, ವೈವಿಧ್ಯತೆ, ಅನುಭವದ ಕಣ್ಣಿ ಕಾಣಬಹುದಾದ ಬದುಕಿನ ಸೂಕ್ಷ್ಮಗಳು, ತನ್ನ ಸುತ್ತಣ ಜನರ ನಡಾವಳಿಗಳು, ಮೌಢ್ಯಗಳು, ವೈಪರೀತ್ಯಗಳು ಹಾಸುಹೊಕ್ಕಾಗಿವೆ. ಪುಟ್ಟಪುಟ್ಟ ಮಾತುಗಳಲ್ಲಿ ಹಿರಿದರ್ಥವನ್ನು ತುಂಬುವ ದಾಸಿಮಯ್ಯನ ವಚನಗಳು ವಚನಸಾಹಿತ್ಯದ ಗರ್ಭಗುಡಿಯ ಸರಳ ಸುಂದರ ಶ್ರೀಮೂರ್ತಿಗಳು. ಅವನು ತನ್ನ ಕಾಲದಲ್ಲಿ ಹೊಸದಾಗಿ ರೂಪುಗೊಳ್ಳುತ್ತಿದ್ದ ವೀರಶೈವಧರ್ಮದ ತಾತ್ತ್ವಿಕಾಂಶಗಳನ್ನು ತನ್ನ ವಚನಗಳಲ್ಲಿ ಹೇಳಹೊರಟಿಲ್ಲ. ಅವನು ತನ್ನ ಕಾಲದ ಸಾಮಾಜಿಕ ವೈರುಧ್ಯಗಳಿಗೆ ಬಾಯಿಯಾಗಿರುವನು; ತನ್ನದೇ ಆದ ಸ್ವತಂತ್ರ ವಿಚಾರಧಾರೆಗಳ ಮೂಲಕ ಸಾಮಾಜಿಕ ಸ್ಥಿತ್ಯಂತರಗಳಿಗೆ ಪರಿಹಾರಗಾಣಿಸಿರುವವನು. ಅವನ ವಚನಗಳಲ್ಲಿನ ನಿರ್ಭೀತ ಅಭಿವ್ಯಕ್ತಿಕ್ರಮ ಅವನೊಬ್ಬ ಆ ಕಾಲದ ಶ್ರೇಷ್ಠ ಸಮಾಜ ಸುಧಾರಕನೆನ್ನುವಂತೆ ಬಿಂಬಿಸಿದೆ. ಅವನಂತೆ ಸ್ವತಂತ್ರವಾಗಿ ಚಿಂತಿಸುವವರು ಅವನ ಸಮಕಾಲೀನರಾಗಿರಬಹುದು ಅಥವಾ ಸ್ವಲ್ಪ ಹಿಂದೆ ಇದ್ದವರಾಗಿರಬಹುದು. ಅಂತಹ ಶರಣರ ಸೂಳ್ನುಡಿಯನ್ನು ಒಂದರಘಳಿಗೆಯಿತ್ತಡೆ ನಿನ್ನನಿತ್ತೆ ಕಾಣಾ ರಾಮನಾಥ ಎನ್ನುವ ಮಾತಿನಲ್ಲಿನ ಅಪಾರವಾದ ಗೌರವವನ್ನು ನಾವು ಗುರುತಿಸಬಹುದು. ಜೇಡರ ದಾಸಿಮಯ್ಯನು ಓರ್ವ ನೇಕಾರನಷ್ಟೇ ಅಲ್ಲ, ಭವ್ಯ ಸಾಂಸ್ಕೃತಿಕ ಪರಂಪರೆಯೊಂದರ ಹರಿಕಾರನಾಗಿರುವವನು.

ಆದ್ಯ ವಚನಕಾರನಾದ ಜೇಡರ ದಾಸಿಮಯ್ಯನು ತನ್ನ ವಚನಗಳ ಸಾಹಿತ್ಯಿಕ ಗುಣ ಹಾಗೂ ಮೌಲ್ಯಗಳಿಂದಾಗಿ ಬಸವಪೂರ್ವದ ಶ್ರೇಷ್ಠ ವಚನಕಾರನಾಗಿರುವನು. ಚಂಪೂ ತನ್ನೆಲ್ಲ ಸಾಧ್ಯತೆಗಳನ್ನು ಪ್ರಕಟಪಡಿಸಿ ಕಳಾಹೀನವಾಗಿದ್ದಾಗ ಸಾಹಿತ್ಯವು ಜನಸಮ್ಮುಖವಾಗಿ ಮರುಹುಟ್ಟು ಪಡೆಯಲು ಚಡಪಡಿಸುತ್ತಿದ್ದಿತು. ಈ ವೇಳೆಗೆ ಶೈವಧರ್ಮವನ್ನು ಪರಿಷ್ಕರಿಸಿ ಅದಕ್ಕೊಂದು ಹೊಸ ರೂಪು ಕೊಡುವ ಪ್ರಯತ್ನವೂ ನಡೆಯಿತು. ಈ ಸಂಧಿಕಾಲದಲ್ಲಿ ಬರುವ ಪ್ರತಿಭಾಶಾಲಿ ಜೇಡರ ದಾಸಿಮಯ್ಯ, ತಾಜಾತನದಿಂದ ಕೂಡಿದ ತನ್ನ ವಿಚಾರಪ್ರಣಾಲಿಯನ್ನು ಜನವಾಣಿ ಹಾಗೂ ದೇಸಿ ಛಂದಸ್ಸಿನಿಂದ ಹದವಾಗಿ ಪಾಕಗೊಳಿಸಿ ಮುಂದಣ ಶಿವಶರಣರಿಗೆ ದಾಸಿಮಯ್ಯ ಮಾರ್ಗದರ್ಶಿಯಾದನು. ಅವನು ವಚನವನ್ನು ಆಗಮಕ್ಕೆ ಸಮನೆನಿಸಿ 'ವಚನಾಗಮ' (ವ.833) ಎಂದು ಕರೆದ ಮೊದಲಿಗ. ಅವನ ವಚನಗಳ ಮುಖ್ಯಗುಣ ಸಂಕ್ಷಿಪ್ತತೆ, ಸರಳತೆ ಹಾಗೂ ಅರ್ಥಪ್ರಚುರತೆ. ಹೊಸದಾಗಿ ರೂಪುಗೊಳ್ಳುತ್ತಿದ್ದ ವೀರಶೈವಧರ್ಮದ ತಾತ್ತ್ವಿಕಾಂಶಗಳನ್ನು ನಾವು ಅವನ ವಚನಗಳಲ್ಲಿ

ಕಾಣಲಾಗದಿದ್ದರೂ ಆ ಕಾಲಮಾನದ ಸಾಮಾಜಿಕ ಜೀವನದ ಹಲವು ವೈಪರೀತ್ಯಗಳ ವಿಡಂಬನೆಯನ್ನೂ, ಟೀಕೆಯನ್ನೂ ಕಾಣುತ್ತೇವೆ. 'ವಚನ' ಒಂದು ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುತ್ತಿದ್ದುದನ್ನು ಇವನ ವಚನಗಳಲ್ಲಿ ನಿಚ್ಚಳವಾಗಿ ನಾವು ಗುರುತಿಸುತ್ತೇವೆ. ಈ ಹೊಸ ಸಾಹಿತ್ಯ ಪ್ರಕಾರಕ್ಕೆ ಬೇರೆ ಬೇರೆ ಆಯಾಮಗಳನ್ನು ತೆರೆದು ತೋರಿಸಿದವನು ಜೇಡರ ದಾಸಿಮಯ್ಯನೆಂದರೆ ತಪ್ಪಾಗಲಾರದು.

ನೇಕಾರನಾಗಿ ಅವನದು ಸಂತೃಪ್ತಿ ಸಮಾಧಾನದ ಬದುಕು. "ಅಂಬಲಿ ಅಳೆಯಾಗಿ, ತುಂಬೆಯ ಮೇಲೋಗರವಾಗಿ । ಉಂಬ ಸದುಭಕ್ತನ ಮನೆಯಾಗಿ ಲೋಕದ ಡಂಭಕರ ಮನೆ ಬೇಡ ರಾಮನಾಥ"; "ಇಂದಿಂಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೆ, ರಾಮನಾಥ"; "ಇರುಹೆಯ ತೆರನೇನು ನೆರೆ ಛಲವಿಲ್ಲದೆ ಮಾಡುವವನ ಭಕ್ತಿ ಇರುಹೆಯಿಂದ ಕರಕಷ್ಟ ಕಾಣಾ! ರಾಮನಾಥ."; "ಎಂಜಲ ತಿಂಬರೆ ಅಂಜದೆ ಅಳುಕದೆ ತಿನ್ನಬೇಕು ಅಂಜುತ ಅಳುಕುತ ತಿಂದರೆ ಅದು ನಂಜಿನಂತಕ್ಕು ಕಾಣಾ ರಾಮನಾಥ."; "ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ, ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ । ಹರಿವ ನದಿ ಎತ್ತಣಾತೀರ್ಥ! ರಾಮನಾಥ."; "ಹೆಂಬೇಡಿಗೆ ಹಿಡಿಯಬಹುದೆ ಹೇಳಿಗೆಯೊಳಗಣ ಹಾವ ತೊರೆಯಬಹುದೆ ಹೊನ್ನು ಹೆಣ್ಣು ಮಣ್ಣು. ನಿನ್ನನರಿಯದ ನರಗುರಿಗಳಿಗೆ, ರಾಮನಾಥ." – ಇಂತಹ ಅರ್ಥಪೂರ್ಣ ಸಾಲುಗಳು ಅವನಲ್ಲಿ ಬಂದಿವೆ.

– ಡಾ. ಎಸ್. ವಿದ್ಯಾಶಂಕರ

ಆದ್ಯ ವಚನಕಾರ
ಜೇಡರ ದಾಸಿಮಯ್ಯರವರ ವಚನಗಳು

ಅಂಗಲಿಂಗದ ಒಳಗೆ ಲಿಂಗಕಂಗಳು ಬೆಳಗು,
ಹಿಂಗಲಾಪುದೆ ಹೇಳು ಅಜ್ಞಾನವ !
ಸಂಗಸುಖಮಥನದ ಅಸಂಗದಿಂದದನರಿದು
ಹಿಂಗಲಿಕೆ ಹೆಸರೇನು? ರಾಮನಾಥ ॥೧॥

ಅಂತರಂಗ ಬಹಿರಂಗದಲ್ಲಿ
ಸರ್ವಾಚಾರ ಸಂಪತ್ತಿನ ಆಚರಣೆಯನರಿಯದ
ಮೂಢಾತ್ಮಂಗೆ ಲಿಂಗಾಂಗ ಸಮರಸವ ಹೇಳಿ
ಸರ್ವಾಂಗ ಸ್ನಾನಧೂಳನ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣ
ಕ್ರಿಯಾಭಸಿತವ ಧರಿಸುವ ನಿರ್ಣಯವ ಹೇಳಿ
ಅಂತರಂಗದ ಜಪವ ಹೇಳುವನೊಬ್ಬ
ಆಚಾರದ್ರೋಹಿ ನೋಡಾ, ರಾಮನಾಥ ॥೨॥

ಅಂಬಲಿ ಅಳೆಯಾಗಿ, ತುಂಬೆಯ
ಮೇಲೋಗರವಾಗಿ,
ಉಂಬ ಸದುಭಕ್ತನ ಮನೆಯಾಗಿ,
ಲೋಕದ ಡಂಭಕರ ಮನೆ ಬೇಡ, ರಾಮನಾಥ ॥೩॥

ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದವ?
ರಾಮನಾಥ ॥೪॥

ಅಚ್ಚ ಶಿವೈಕ್ಯಂಗೆ ಹೊತ್ತಾರೆ ಅಮವಾಸೆ;
ಮಟ್ಟ ಮಧ್ಯಾಹ್ನ ಸಂಕ್ರಾಂತಿ;
ಮತ್ತೆ ಅಸ್ತಮಾನ ಪೌರ್ಣಮಿ ಹುಣ್ಣಿಮೆ;
ಭಕ್ತನ ಮನೆಯ ಅಂಗಳವೆವಾರಣಾಸಿ ಕಾಣಾ !
ರಾಮನಾಥ ॥೫॥

ಅಡಗ ತಿಂಬರು; ಕಣಿಕದ ಅಡಿಗೆಯಿರಲಿಕೆ.
ಕುಡಿವರು ಸುರೆಯ ಹಾಲಿರಲಿಕೆ.
ಹಡದುಂಬ ವೇಶಿಯನೊಲ್ಲದೆ ಹೆರರ ಮಡದಿಗಳುಪುವ
ಸತ್ತ ನಾಯ ತಿಂಬ ಹಡ್ಡಿಗರನೇನೆಂಬೆನೈ !
ರಾಮನಾಥ ॥೬॥

ಅಡಗಿನೊಳಗಣ ಹಾಲು ಅಡಗಿಪ್ಪ ಭೇದವನು
ಬೆಡಗಪ್ಪ ತುಪ್ಪದ ಕಂಪಿನ ಪರಿಯಂತೆ.
ಎಲೆ ಮೃಡನೆ! ನೀನು ಪ್ರಾಣ ಪ್ರಕೃತಿಗಳೊಳಗೆ
ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ !
ರಾಮನಾಥ ॥೭॥

ಅಡವಿ ಅರಣ್ಯದಲಿ ಮಡಿವನಕ ತಪವಿದ್ದು
ಮಡಿವಾಗ ಮೃಡನ ಮರೆದಡೆ,
ತುಂಬಿದ ಸಕ್ಕರೆಯ ಮಡುವಿನೊಳಗೊಕ್ಕಂತೆ !
ರಾಮನಾಥ ॥೮॥

ಅಡವಿಯಂಗಡಿಯಕ್ಕು, ನಡುಗಡಲು ನೆಲೆಯಕ್ಕು.
ತೊಡಕುವ ಮಾರಿಯಪಮೃತ್ಯ
ಶಿವಭಕ್ತರ ಒಡಲು ನಿನ್ನೊಡಲೆಂದು
ಮುಟ್ಟಲಮ್ಮವು ಕಾಣಾ ! ರಾಮನಾಥ ॥೯॥

ಅಣುರೇಣು ಮಧ್ಯದ ಪ್ರಣವದಾಧಾರ
ಭುವನಾಧೀಶನೊಬ್ಬನೆಯಯ್ಯ.
ಇದೆ ಪರಿಪೂರ್ಣವೆಂದೆನ್ನದನ್ಯದೈವವ ಸ್ಮರಿಸುವ
ಭವಿಯನೆಂತು ಭಕ್ತನೆಂಬೆನೈ? ರಾಮನಾಥ ॥೧೦॥

ರ್ಥವುಂಟೆಂದು ಅಹಂಕರಿಸಿ ಮಾಡುವನ ಭಕ್ತಿ
ತೊತ್ತಿನ ಕೂಟ, ತೊರೆಯನ ಮೇಳದಂತೆ.
ತನು–ಮನ–ಧನದಲ್ಲಿ ವಂಚನೆಯುಳ್ಳ
ಪ್ರಪಂಚಿಯ ಮನೆಯ ಕೂಳು
ಶುನಕನ ಬಾಯ ಎಲುವ ಪ್ರತಿಶುನಕ ತಿಂದಂತೆ ಕಾಣಾ !
ರಾಮನಾಥ ॥೧೧॥

ಅನ್ಯಜಾತಿಯ ಮನೆಯ ಅನ್ನಪಾನಾದಿಗಳ
ತನ್ನ ಉದರದಲ್ಲಿ ಇಕ್ಕುವವ ಶಿವದ್ರೋಹಿ,
ಶಿವವಂಚಕನು.
ಅವ ನಿಮ್ಮವ ಎನಿಸಿದಡೆ ಎನಿಸಲಿ
ಅವನ ಎನ್ನತ್ತ ತಾರದಿರಾ, ರಾಮನಾಥ ||೧೨||

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯಾ.
ಅನುಭಾವವೀ ತನುವಿಂಗೆ ಆಧಾರ.
ಅನುಭಾವರ ಅನುಭಾವವನು
ಮನವಾರೆ ವೇದಿಸಿದವರಿಗೆ ಜನನವಿಲ್ಲ ಕಾಣಾ !
ರಾಮನಾಥ ||೧೩||

ಅನುಭಾವವಿಲ್ಲದ ಭಕ್ತಿ ತಲೆಕೆಳಗಾದುದಯ್ಯಾ.
ಅನುಭಾವ ಭಕ್ತಿಗಾಧಾರ; ಅನುಭಾವ ಭಕ್ತಿಗೆ ನೆಲೆವನೆ.
ಅನುಭಾವ ಉಳ್ಳವರ ಕಂಡು
ತುರ್ಯ ಸಂಭಾಷಣೆಯ ಬೆಸಗೊಳ್ಳದಿದ್ದಡೆ
ನರಕದಲ್ಲಿಕ್ಕಯ್ಯಾ ! ರಾಮನಾಥ ||೧೪||

ಅರುಹ ಅರಿಯಲೆಂದು
ಕುರುಹ ಕೈಯಲಿ ಕೊಟ್ಟ !
ಅರುಹನೆ ಮರದು ಕುರುಹನೆ ಹಿರಿದ !
ಈ ಕುರುಂಬರಿಗಿನ್ನೆತ್ತಣ ಮುಕ್ತಿಯೊ? ರಾಮನಾಥ ||೧೫||

ಆಡಬಾರದ ಬಯಲು
ಸೂಡಬಾರದ ಬಯಲು
ನುಡಿಯಬಾರದ ಬಯಲು
ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ ||೧೬||

ಆಚಾರಸಹಿತವಿದ್ದಡೆ ಗುರುವೆಂಬೆ.
ಆಚಾರಸಹಿತವಿದ್ದಡೆ ಲಿಂಗವೆಂಬೆ.
ಆಚಾರಸಹಿತವಿದ್ದಡೆ ಜಂಗಮವೆಂಬೆ.

ಸದಾಚಾರಸಹಿತವಿರದೆ
ಅನ್ಯದೈವ ಭವಿಮಾಟಕೂಟವ ಮಾಡುವವನ ಮನೆಯಲ್ಲಿ
ಲಿಂಗಾರ್ಚನೆಯ ಮಾಡಿದನಾದಡೆ
ನಿಮಗಂದೆ ದೂರವಯ್ಯಾ, ರಾಮನಾಥ ॥೧೭॥

ಆದಿ ಆರರ ಭೇದ
ತನುಗುಣ ಮೂವತ್ತಾರ ಮೀರಿ
ತೋರಿದುದ ತೋರಿ ಮತ್ತೆ ಆರೂಢವಾದರೆ
ಮೇಲೆ ನಿನ್ನಿಚ್ಛೆ ಕಾಣಾ ! ರಾಮನಾಥ ॥೧೮॥

ಆದಿ ಪ್ರಕೃತಿಯ ಮಕ್ಕಳು ಅಂದಿನವರು
ಆದಿ ಪ್ರಕೃತಿಯ ಮಕ್ಕಳು ಇಂದಿನವರು
ಆದಿಪ್ರಕೃತಿಯ ಜೀವ ಪ್ರಕೃತಿಯ
ಭೇದವ ಬಲ್ಲವರ ಪಾದವೆ ಗತಿಯೆನಗೆ
ರಾಮನಾಥ ॥೧೯॥

ಆಸೆ ಪರಿಣಾಮಕ್ಕೆ ಬೇಸತ್ತು ಹೋಯಿತ್ತು.
ಆಶ್ರಯದ ನಿದ್ರೆ ಕೆಟ್ಟಿತ್ತು
ಗ್ರಾಸ ಮೆಲ್ಲನಾಯಿತ್ತು.
ಸ್ತ್ರೀಯರ ಮೇಲಣ ಇಚ್ಛೆ ಕೆಟ್ಟಿತ್ತು.
ಈಶ್ವರ ! ನಿಮ್ಮ ಪಾದಾಂಬುಜ ಸೇವೆಯಿಂದ ಕಾಣಾ !
ರಾಮನಾಥ ॥೨೦॥

ಇಂತೆಂದ ಭೂಮಿಯ; ಇಂತೆಂದ ಗಗನವ.
ಇಂತೆಂದ ಸಪ್ತಸಾಗರವ.
ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ
ಅಚಿಂತನನವರಾರು ಬಲ್ಲರೈ ರಾಮನಾಥ ॥೨೧॥

ಇಂದಿಂಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ?
ತಂದಿಕ್ಕುವ ಶಿವಂಗೆ ಬಡತನವೆ? ರಾಮನಾಥ ॥೨೨॥

ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ.
ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ
ಹತ್ತಿಪ್ಪೆ ಕಾಣಾ ! ರಾಮನಾಥ ॥೨೩॥

ಇರುಹೆಯ ತೆರನೇನು ನೆರೆ ಛಲವಿಲ್ಲದೆ
ಮಾಡಿದವನ ಭಕ್ತಿ ಇರುಹೆಯಿಂದ ಕರಕಷ್ಟ ಕಾಣಾ !
ರಾಮನಾಥ ॥೨೪॥

ಇಳೆ ನಿನ್ನ ದಾನ, ಬೆಳೆ ನಿಮ್ಮ ದಾನ.
ಸುಳಿದು ಬೀಸುವ ವಾಯು ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ ॥೨೫॥

ಇಳೆಯನಾಧಾರ ಮಾಡಿ, ಜಳವ ಜೀವನ ಮಾಡಿ
ಒಳಗಿಪ್ಪ ಭೇದವನು
ವಾಯುವ ಕಂಬವ ಮಾಡಿ, ನಳನ ಚಂದ್ರಮನ ಮಡಗಿ
ಆಕಾಶವನು ಗಳನೆ ಮುಚ್ಚಿದ ಬೆಳಗಿಗೆ
ಆನು ಬೇಡಿಕೊಂಬೆ, ರಾಮನಾಥ ॥೨೬॥

ಈಶ ! ನಿಮ್ಮ ಪೂಜಿಸಿದ ಬಳಿಕ
ಅನ್ಯ ದೈವಂಗಳಿಗೆ ಹೇಸಲೇ ಬೇಕು.
ಹೇಸದೆ ಅನ್ಯದೈವಕ್ಕೆ ಆಸೆ ಮಾಡಿದಡೆ
ಅವ ನಮ್ಮ ಈಶ್ವರಂಗೆ ಹೊರಗು.
ದೋಷರಹಿತ ಭಕ್ತರು ಅವಂಗೆ ಕುಲವೆಂದು
ಕೂಸ ಕೊಟ್ಟು ಕೂಡುಂಡಡೆ
ಮೀಸಲ ಬೋನವ ನಾಯಿ ಮುಟ್ಟಿದಂತೆ ಕಾಣಾ !
ರಾಮನಾಥ ॥೨೭॥

ಈಶನ ಶರಣರು ವೇಶಿಯ ಹೋದಡೆ
ಮೀಸಲೋಗರವ ಹೊರಗಿರಿಸಿದಡೆ
ಹಂದಿ ಮೂಸಿ ನೋಡಿದಂತೆ ರಾಮನಾಥ ॥೨೮॥

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.
ಈ ಸೀರೆಯ ನೆಯ್ದವ ನಾನೊ ನೀನೋ?
ರಾಮನಾಥ ॥೨೯॥

ಉಣ್ಣಿ ಕೆಚ್ಚಲ ಹತ್ತಿ ಉಂಬುದೆ ನೊರೆವಾಲ?
ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು
ಆ ಉಣ್ಣಿಯಿಂದ ಕರಕಷ್ಟ ! ರಾಮನಾಥ ॥೩೦॥

ಉರಿವ ತೃಣದ ಮೇಲೆ ತೃಣವ ತಂದಿರಿಸಿದಡೆ
ಆ ತೃಣವನ್ನು ಆ ಕೆಂಡ ನುಂಗುವಂತೆ
ಗುರುಚರಣದ ಮೇಲೆ ತನುತೃಣವನಿರಿಸಿದಡೆ
ಆ ತನುವೆಲ್ಲ ಲಿಂಗಮಯ ಕಾಣಾ ! ರಾಮನಾಥ ॥೩೧॥

ಉಳುವನ ಹೆಳೆವನ ಉಳುವವನ ಕೊಲುವ
ಬೇಡನ, ಹಿಳಿಲನಿಕ್ಕಿ ಕರದುಂಬ ಭಕ್ತನ
ಒಳುಹನೇನೆಂಬೆ, ರಾಮನಾಥ ॥೩೨॥

ಊರ ಮಾಡುವನ ಭಕ್ತಿ ದೂರದ ಹೊಲನಂತೆ
ದೂರದಿಂ ಬಂದು ಅದು ನಿಂದು
ಮುಂದೆ ಸಾಗರವಾಗಲರಿಯದು, ರಾಮನಾಥ ॥೩೩॥

ಎಡರಡಸಿದಲ್ಲಿ ಮೃಡ ! ನಿಮ್ಮ ನೆನವರು.
ಎಡರಡಸಿದ ವಿಪತ್ತು ಕಡೆಯಾಗಲೊಡನೆ
ಮೃಡ ! ನಿಮ್ಮನೆಡಹಿಯೂ ಕಾಣರು !
ರಾಮನಾಥ ॥೩೪॥

ಎಣ್ಣೆಯಿದ್ದು ಎಳ್ಳು ನನೆಯದ ಭೇದವ
ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ
ಕಾಮವಿದ್ದು ಕನ್ನೆಯನನುಭವಿಸದ ಭೇದವ
ಪರವಿದ್ದು ಪ್ರಾಣನ ಪ್ರಕೃತಿಯ ಹರಿಯದ ಭೇದವ
ನರರೆತ್ತ ಬಲ್ಲರೈ? ರಾಮನಾಥ ॥೩೫॥

ಎಂಜಲ ತಿಂಬರೆ ಅಂಜದೆ ಅಳುಕದೆ ತಿನ್ನಬೇಕು.
ಅಂಜುತ ಅಳುಕುತ ತಿಂದರೆ
ಅದು ನಂಜಿನಂತಕ್ಕು ಕಾಣಾ !
ರಾಮನಾಥ ॥೩೬॥

ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ.
ಕರ್ತಾರ ! ನಿನಗೆ ಕರವೆತ್ತಿ ಹೊಡವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ,
ರಾಮನಾಥ ॥೩೭॥

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ !
ರಾಮನಾಥ ॥೩೮॥

ಎತ್ತು ನಿಮ್ಮ ದಾನ; ಬಿತ್ತು ನಿಮ್ಮ ದಾನ.
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳ? ರಾಮನಾಥ ॥೩೯॥

ಎನ್ನ ನಾನರಿವುದಕ್ಕೆ ಮುನ್ನ ಎಲ್ಲಿದ್ದೆಯಯ್ಯ?
ಎನ್ನೊಳಗೆ ಇದ್ದೆಯಯ್ಯ !
ಎನ್ನ ನಾನರಿಯಲು ಮುಂದೆ ಬಂದು ಗುರುರೂಪಾಗಿ
ಎನ್ನೊಳಗೆ ಅಡಗಿದ್ದೆಯಲ್ಲ ! ರಾಮನಾಥ ॥೪೦॥

ಎನ್ನೊಡಲಾದಡೆ ಎನ್ನಿಚ್ಛೆಯಲ್ಲಿರದೆ?
ನಿನ್ನೊಡಲಾದಡೆ ನಿನ್ನಿಚ್ಛೆಯಲ್ಲಿರದೆ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ.
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ !
ರಾಮನಾಥ ॥೪೧॥

ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜಳ್ಳ ತೂರಿದಲ್ಲಿ ಬತ್ತವುಂಟೆ?
ಕಳ್ಳ ಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಕಾಣಾ ! ರಾಮನಾಥ ॥೪೨॥

ಒಂದರಿವು ಒಂದು ನಡೆ ಒಂದು ಸ್ಥಾನದೊಳಗೆ ಒಂದು
ಮುಂದೆ ಪ್ರಸಾದದಂತುವನರಿದಡೆ
ನಿಶ್ಚಿಂತ ಪರಶಿವನು, ರಾಮನಾಥ ॥೪೩॥

ಒಂದಾಗಿಹವೈದು ಭೂತ
ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೆ?
ನಿಂದು ನೋಡಲು ಜಗವಂದ್ಯನಾಗಿಪ್ಪೆ,
ಇನ್ನು ನಿಂದಿಸುವೆನಾರನಯ್ಯ? ರಾಮನಾಥ ॥೪೪॥

ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ.
ಹತ್ತೆ ಕರೆದಿಕ್ಕಿದುದು ಪ್ರಸಾದವಲ್ಲ.
ತರ್ಕೈಸಿ ನಿಮ್ಮುವನಪ್ಪಿಕೊಂಡಡೆ
ಅದು ನಿಶ್ಚಯಪ್ರಸಾದ ಕಾಣಾ ! ರಾಮನಾಥ ॥೪೫॥

ಒಡಲಿಚ್ಚೆಗೆ ಭವಿಯ ಒಡಗೂಡಿಕೊಂಡು ಉಂಡು
ಹಡಿಕೆಯ ತಿಂದ ನಾಯಿ ಮುಂದುಡೆ ಬಗುಳುವಂತೆ !
ಮೃಡನಿಲ್ಲದವನ ಮನೆಯ ಕೂಳು
ಹೊಲೆಯರ ಮನೆಯ ಅಡಗಿಂದ ಕರಕಷ್ಟ ಕಾಣಾ !
ರಾಮನಾಥ ॥೪೬॥

ಒಡಲುಗೊಂಡವ ನಾನು; ಪ್ರಾಣವಿಡಿದವ ನೀನು.
ಎನ್ನೊಡಲ ಸಂಚುವ ನೀ ಬಲ್ಲೆ !
ನಿನ್ನ ಪ್ರಾಣದ ಸಂಚುವ ನಾ ಬಲ್ಲೆ !
ಇದು ಕಾರಣ,
ಇದು ಎನ್ನೊಡಲಲ್ಲ ನಿನ್ನೊಡಲು.
ನಿನ್ನ ಪ್ರಾಣವೆನ್ನಲ್ಲಿ ಅಡಗಿದ ಭೇದವ
ನೀ ಬಲ್ಲೆ, ನಾ ಬಲ್ಲೆನೈ, ರಾಮನಾಥ ॥೪೭॥

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರ !
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ !
ರಾಮನಾಥ ॥೪೮॥

ಒಡಲುಗೊಂಡೆನಾಗಿ ಮೃಡ !
ನಿಮಗೆ ಹಗೆಯಾದೆನಯ್ಯ.
ಆನು ಒಡಲುಗೊಂಡಡೇನು?
ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ
ಎನ್ನ ಒಡಲಳಿದು ಹೋದಡೇನು?
ಪ್ರಾಣ ನಿಮ್ಮ ಎಡೆಯಲಡಗುವದಯ್ಯಾ,
ರಾಮನಾಥ ॥೪೯॥

ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಡ ! ನೀ ಪ್ರಾಣ ಪ್ರಕೃತಿಯೊಳಗೆ ಅಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ ॥೫೦॥

ಒಡೆಯರನೊಡಗೊಂಡು ಬಂದು
ಕೈಗಡಿಗೆಯ ನೀರ ಕಯ್ಯಲ್ಲಿ ಕೊಟ್ಟು
'ಒಡೆಯರೆ ! ಕಾಲ ತೊಳಕೋ !'
ಎಂಬುವನ ಮನೆಗೆ ಅಡಿಯಿಡಲಾಗದಯ್ಯಾ ಮೃಡಶರಣರು.
ಒಡಲಿಚ್ಛೆಗೆ ಬಡಮನವ ಮಾಡಿ
ಹೊಕ್ಕುಂಬವರ ಎನ್ನೆಡೆಗೆ ತೋರದಿರಾ, ರಾಮನಾಥ ॥೫೧॥

ಒರತೆಗಳ ಕಂಡಿಂತು ಕೆಲರೀ ಬಾವಿಯ ತೋಡೆಂಬರು !
ಅರವಟಿಗೆ ಛತ್ರವು ತಮ್ಮದೆಂಬರು !
ಎಲೆ ಪಯಿರೈದದಿರೆ, ಸುರಿವ ಮಳೆ ಸುರಿಸದಿದ್ದಡೆ,
ಅವರೇತರಲ್ಲಿ ನೀಡುವರಯ್ಯಾ ! ರಾಮನಾಥ ॥೫೨॥

ಒಲವಸವಿಲ್ಲದ ಭಕ್ತಿ, ಲವಲವಿಕೆಯಿಲ್ಲದ ಪೂಜೆ,
ಸಲೆ ನಿಮ್ಮ ನಂಬಿಯೂ ನಂಬದವನ ಬಾಳುವೆ,
ಹೊಲೆಯರ ನಾಯ ಹುಲುಸರವಿಯಿಂದ ಕರಕಷ್ಟಕಾಣ !
ರಾಮನಾಥ ॥೫೩॥

ಒಳಗರಿದ ಭಕ್ತನ ಒಳಗಾದ ಲಿಂಗವು
ಒಳಗಾದ ಲಿಂಗದೊಳಗಾದ ಭಕ್ತನ

ಹೊರಗಾದ ಲಿಂಗವ ಒಳಗೆ ತಂದಿರಿಸಿ
ಆ ಭಕ್ತನ ತನುವಿನ ವಳೆಯವನಿನ್ನೇನ ಹೇಳುವೆ !
ರಾಮನಾಥ ||೫೪||

ಕಂಚುಮುಟ್ಟು ಕಲ್ಲುಗುಂಡುಗಳೇರುವಣ್ಣಗಳು ನೀವು ಕೇಳಿರೆ !
ಘಂಟೆಯ ನುಡಿಸಿ ಶಿವನನುಂಟುಮಾಡಿಕೊಂಡಿಹೆನೆಂಬಿರಿ.
ಆ ಘಂಟೆಯ ಧ್ವನಿಗೆ ಒಂದು ಗೋಟಡಕೆಯ ಸೋಲ,
ಗುರು ರಾಮನಾಥನು ||೫೫||

ಕಡಿಗಳ ಹದಿನೆಂಟನೊಡಗೂಡಿ ಸಂದಿಸಿ
ತೊಡಚಿ ಕಟ್ಟಿದೆ ನರರ ಬಂಧನದಲ್ಲಿ.
ಈ ತೊಡಹದ ನಾಯ ನಿಚ್ಚ ನೀನಿಕ್ಕಿ
ಕೆಡಿಸಿದೆಯಯ್ಯಾ, ರಾಮನಾಥ ||೫೬||

ಕಡುಭಸಿತವ ಹೂಸಿ,
ಮುಡಿಯಲ್ಲಿ ಲಿಂಗವ ಧರಿಸಿ,
ಮಂತ್ರಮೂರ್ತಿಯ ಮನವಾರೆ ಪೂಜಿಸಿ,
ಭಕ್ತಿ ವೇಷವ ಹೊತ್ತು ಭಕ್ತನೆನಿಸಿದ ಬಳಿಕ
ಭವಿಯ ಮನೆಯನ್ನವ
ನಾಯಡಗು, ನರರು ಹೇಸಿದ
ಅಮೇಧ್ಯವೆಂದೆ ಕಾಣಬೇಕು.
ಹೀಗಲ್ಲದೆ ಒಡಲಿಚ್ಛೆಗೆ ತುಡುಗಣಿ ನಾಯಂತೆ
ಒಡಲ ಹೊರೆವವರ ಮೆಚ್ಚ, ನಮ್ಮ ರಾಮನಾಥ ||೫೭||

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ.
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೆ ಕಡೆಗೀಲು ಕಾಣಾ ! ರಾಮನಾಥ ||೫೮||

ಕಣ್ಣು ಮೀಸಲು ಶಿವನ; ಕೈ ಮೀಸಲು ಶಿವನ.
ಕಾಲು ಮೀಸಲು ಶಿವನ; ನಾಲಗೆ ಮೀಸಲು ಶಿವನ.
ಕಿವಿ ಮೀಸಲು ಶಿವನ; ನಾಸಿಕ ಮೀಸಲು ಶಿವನ.
ತನು ಮನವೆಲ್ಲಾ ಮೀಸಲು ಶಿವನ.

ಈ ಮೀಸಲು ಬೀಸರವಾಗದಂತಿರ್ದಡೆ
ಆತನೇ ಜಗದೀಶ ಕಾಣಾ ! ರಾಮನಾಥ ॥೫೯॥

ಕತ್ತೆ ಬಲ್ಲುದೆ ಕಸ್ತುರಿಯ ವಾಸನೆಯ?
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ?
ಭಕ್ತಿಯನರಿಯದ ವ್ಯರ್ಥಜೀವಿಗಳು
ನಿಮ್ಮವರನೆತ್ತ ಬಲ್ಲರೈ? ರಾಮನಾಥ ॥೬೦॥

ಕರಸ್ಥಲದ ಜ್ಯೋತಿಯಿದು.
ಕರುವಿಟ್ಟ ಎರಕವಿದು.
ಇದರ ನೆಲೆಯ ತಿಳಿದು ನೋಡಿದಡೆ ನಿಜದಾನಂದವು.
ಹೊಲಬುದೋರದ ನಿಸ್ಸಂಗದ ಹೊಲಬನರಿದು
ಕೂಡಿದಾತನೆ ಶರಣ ಕಾಣಾ ! ರಾಮನಾಥ ॥೬೧॥

ಕರಸ್ಥಲವೆಂಬ ದಿವ್ಯ ಭೂಮಿಯಲ್ಲಿ
ಮಹಾಘನಲಿಂಗ ನಿಕ್ಷೇಪವಾಗಿದೆ !
ಈ ದಿವ್ಯ ನಿಕ್ಷೇಪವ ಸಾಧಿಸುವಡೆ
ಅಂಜನಸಿದ್ಧಿಯಿಲ್ಲದೆ ಸಾಧಿಸಬಾರದು.
ಲಿಪಿಯಿಲ್ಲದೆ ತೆಗೆವಡಸದಳ.
ಆ ಲಿಪಿಯ ಪ್ರಯವ ಷಟ್‌ತತ್ವದ ಮೇಲೆ ನಿಶ್ಚಯಿಸಿ.
ಆ ನಿಶ್ಚಯದೊಳಗೆ ಈ ನಿಕ್ಷೇಪದ ಕರ್ತೃವಿನ ಹೆಸರೋದಿತ್ತು.
ತಿಳಿಯಲೋದುವನ್ನಬರ ಆತ
ನಮ್ಮ ಹೆತ್ತಯ್ಯನೆಂಬ ಹೆಸರೋದಿತ್ತು.
ಆ ಓದಿಕೆಯ ಕಡೆಯಕ್ಕರದೊಳಗೆ ಅಂಜನಸಿದ್ಧಿ ಹೇಳಿತ್ತು.
ಅದಾವ ಪರಿಕ್ರಮದ ಅಂಜನವೆಂದಡೆ
ಅದೆಮ್ಮ ಹೆತ್ತಯ್ಯ ಜಗದ್ವಿಲಾಸ ತದರ್ಥವಾಗಿ
ಆ ತನ್ನ ಮೂಲಶಕ್ತಿ ಸಂಭೂತವಾದುದು.
ಅಲ್ಲಿ ಹುಟ್ಟಿದ ದಿವ್ಯ ಚಿತ್ಕಳೆಯಿಂದೊಗೆದ ದಿವ್ಯಭಸಿತವೆಂದಿತ್ತು.
ಆ ದಿವ್ಯ ಭಸಿತವೆಂಬ ದಿವ್ಯಾಂಜನವ ತಳೆದುಕೊಂಡು
ಅತಿ ವಿಶ್ವಾಸದಿಂದ ನಾನೆನ್ನ ಹಣೆಯೆಂಬ ಕಣ್ಣಿಂಗೆಚ್ಚಿ
ಸರ್ವಾಂಗವ ತೀವಲೊಡನೆ
ಕರಸ್ಥಲದೊಳಗಣ ನಿಕ್ಷೇಪ ಕಣ್ದೆರವಾಯಿತ್ತು.

ಆ ಕಣ್ದೆರವಾದ ನಿಕ್ಷೇಪವ ಮುಟ್ಟಹೋದಡೆ
ಅಲ್ಲಿ ನಮ್ಮ ಹೆತ್ತಯ್ಯನ ಹೊಳಹ
ಕಂಡು ತಳವೆಳಗಾದೆ ಕಾಣಾ !
ರಾಮನಾಥ ||೬೨||

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ.
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ.
ನಿಮ್ಮ ಶರಣರ ಸೂಳ್ನುಡಿಯ
ಒಂದರೆಘಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ ! ರಾಮನಾಥ ||೬೩||

ಕಲಿವೀರ ಕಡಿವಲ್ಲಿ, ಬಲುವಿಷವು ಸುಡುವಲ್ಲಿ
ನೆಲೆಗೆಟ್ಟು ಮೊರೆಯೊ ! ಎಂಬಲ್ಲಿ
ನಿಮ್ಮ ತಲೆಗಾದು ರಕ್ಷಿಸಿದ
ಸುಲಭನನರಿಯಿರೆ ಹೊಲೆಯರಿರ !
ಸಲೆ ನಂಬಿ ಬದುಕಿರೊ, ರಾಮನಾಥ ||೬೪||

ನೀಚಜಾತಿಗಳು ಲಿಂಗವ ಮುಟ್ಟಿ ಪೂಜಿಸಲಾಗದು.
ಮುಟ್ಟಿದಡೆ ಮುಟ್ಟಿದಂತಿರಬೇಕು.
ನಿಮ್ಮ ಮುಟ್ಟಿಯೂ ಹಿಂದಣ ಕುಲವ ಕೂಡಿದರಾದಡೆ
ಮುಂದೆ ಹೊಲೆಯರ ಮನೆಯ
ಹುಳಿತ ನಾಯ ಬಸುರಲಿ ಬಪ್ಪುದು ತಪ್ಪದು ಕಾಣಾ !
ರಾಮನಾಥ ||೬೫||

ಕಳದೊಳಗಣ ಕಳವೆಯನೊಕ್ಕುವರೊಳಗದೆ ಶಿವಲಿಂಗ
ಮುಕ್ಕಣ್ಣ ! ನೀನೊಲಿದ ಸದ್ಭಕ್ತನ ಅಕ್ಕುಲಿಜನೆಂದಡೆ
ಅಕ್ಷಯನರಕದಲ್ಲಿಕ್ಕುವ ಕಾಣಾ ! ರಾಮನಾಥ ||೬೬||

ಕಾಯ ನಿಮ್ಮ ದಾನ; ಜೀವ ನಿಮ್ಮದಾನ.
ಕಾಯ ಜೀವ ಉಳ್ಳಲ್ಲಿಯೇ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳ? ರಾಮನಾಥ ||೬೭||

ಕೀಳು ಡೋಹರ ಕಕ್ಕ; ಕೀಳು ಮಾದರ ಚೆನ್ನ.
ಕೀಳು ಓಹಿಲದೇವ; ಕೀಳು ಉದ್ಭಟಯ್ಯ.
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ !
ರಾಮನಾಥ ॥೬೮॥

ಕುಲಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ
ತಲೆವಾಗುವೆ ನಾನು ಕುಲಜರೆಂದು.
ಬೆಬ್ಬನೆ ಬೆರತು ನಿಮ್ಮನೊಲಿಸಿದ ಶರಣರಿಗೆ
ತಲೆವಾಗದವನ ತಲೆ ಶೂಲದ ಮೇಲಣ ತಲೆ ಕಾಣಾ !
ರಾಮನಾಥ ॥೬೯॥

ಕುಲಸ್ವಾಮಿ ನಿಮ್ಮವ ಒಲಿವುದ ಕಂಡಡೆ
ತಲೆವಾಗುವೆ ಕಾತ ಕಳವೆಯಂತೆ
ಕುಲಜ ನಾನೆಂದು ತಲೆವಾಗದಿದ್ದಡೆ ಸಲೆ
ಶೂಲದ ತಲೆಯಯ್ಯಾ, ರಾಮನಾಥ ॥೭೦॥

ಕುಲಸ್ವಾಮಿ ನೀ ನಿಂದ ಹೆಜ್ಜೆಯಲ್ಲದೆ
ನಾನೊಂದು ಹೆಜ್ಜೆಯನಿಡೆನಯ್ಯ; ಎನಗೊಂದು ಹೆಜ್ಜೆಯಿಲ್ಲ.
ನಿನ್ನ ಹೆಜ್ಜೆ ಎನ್ನ ಹೆಜ್ಜೆ ಒಂದಾದ ಭೇದವ
ಜಗದನ್ಯಾಯಿಗಳೆತ್ತ ಬಲ್ಲರೈ? ರಾಮನಾಥ ॥೭೧॥

ಕೆಡಹಿದ ಚಿನ್ನದ ಎಡೆಯಣ ಮಣ್ಣುವ
ಹೆಡೆಗೆದುಂಬಲಾ ಚಿನ್ನದೋರಿ
ಮೃಡ! ನಿಮ್ಮ ಶರಣರ ಎಡೆಗಳನರಿದ ಬಳಿಕ
ಉಡುಗಿದ ಮಣ್ಣೇಕೆ? ರಾಮನಾಥ ॥೭೨॥

ಖಂಡಿತವಿಲ್ಲದ ಅಖಂಡಿತ ನೀನೆ.
ನಿಮ್ಮ ಕಂಡವರುಂಟೆ? ಹೇಳಯ್ಯ.
ಕಂಡೆನೆಂಬವರೆಲ್ಲ ಬಂಜೆಯ ಮಕ್ಕಳು
ನೀ ನಿಂದ ಹೆಜ್ಜೆಯ ಕೆಳಗೆ
ಒಂದು ಬಿಂದು ಹುಟ್ಟಿ ಬೆಳಗುವ ಛಂದವ ಕಂಡು
ಕಣ್ದೆರೆದೆ ಕಾಣಾ ! ರಾಮನಾಥ ॥೭೩॥

ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ
ಭೂಮಂಡಳಕ್ಕೆ ಅರಸಾಗಿ ಹುಟ್ಟುವನಾತನು.
ಗಂಡನುಳ್ಳಮ್ಮನ ಕಂಡು ಒಡವೆರದಾತ
ನರಕದಲ್ಲಿ ದಿಂಡುಗೆಡದಿಪ್ಪನೈ, ರಾಮನಾಥ ॥೭೪॥

ಗಂಡ ಭಕ್ತನಾಗಿ, ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ !
ಸತ್ತ ನಾಯ ತಂದು ಅಟ್ಟದ ಮೇಲಿಳುಹಿ
ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ !
ರಾಮನಾಥ ॥೭೫॥

ಗಿರಿಗಳೆಲ್ಲ ಕೂಡಿ ಮೇರುಗಿರಿಗೆ ಸರಿಯಾಗಬಲ್ಲವೆ?
ತರುಗಳೆಲ್ಲ ಕೂಡಿ ಕಲ್ಪತರುವಿಗೆ ಸರಿಯಾಗಬಲ್ಲವೆ?
ಸರಿಯಿಲ್ಲ ನೋಡಾ
ನಮ್ಮ ಭಕ್ತರಿಗೆ ನರರು ಸುರರು ಸರಿಯಲ್ಲ ನೋಡಾ !
ಪರುಷಕ್ಕೆ ಪಾಷಾಣ ಸರಿಯೆ?
ಮರುಜವಣಿಗೆ ಔಷಧ ಸರಿಯೇ?
ಇದು ಕಾರಣ, ಶಿವಭಕ್ತರ್ಗೆ
ಲೋಕದವರು ಸರಿಯೆಂದರೆ
ನರಕ ತಪ್ಪದಯ್ಯಾ, ರಾಮಾನಾಥ ॥೭೬॥

ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು.
ಮಾಯಾ ಪ್ರಪಂಚು ಬಿಟ್ಟಿತ್ತು.
ಮುಂದಣ ಹುಟ್ಟರತು ಹೋಯಿತ್ತು.
ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ !
ರಾಮನಾಥ ॥೭೭॥

ಗುರು ನಿರೂಪವ ಮರದು
ಪರವಧುವ ನೆರವರು; ಪರವಧುವನಳುಪುವರು.
ಗುರುವಿಲ್ಲದವವರಿಗೆ ! ಪರವಿಲ್ಲವವರಿಗೆ !
ಇಂತಪ್ಪ ನರಕಿಗಳನೆನಗೊಮ್ಮೆ ತೋರದಿರಾ,
ರಾಮನಾಥ ॥೭೮॥

ಗುರುಭಕ್ತನಾದಲ್ಲಿ ಘಟಧರ್ಮವಳಿದು
ಲಿಂಗಭಕ್ತನಾದಲ್ಲಿ ಮನಸಂಚಲ ನಿಂದು
ಜಂಗಮಭಕ್ತಿಯಲ್ಲಿ ಧನದಾಸೆಯಳಿದು
ತ್ರಿವಿಧಾಂಗ ಸಲೆ ಸಂದು ತ್ರಿಕರಣ ಶುದ್ಧನಾಗಿದ್ದವಂಗೆ
ಮರ್ತ್ಯ ಕೈಲಾಸವೆಂಬ ಕಾಳುಮಾತಿಲ್ಲ
ಆತ ನಿಶ್ಚಿಂತ ನಿಜಮುಕ್ತನಯ್ಯಾ, ರಾಮನಾಥ ॥೭೯॥

ಗುರು ಲಿಂಗ ಒಂದೆಂಬರು.
ಗುರು ಲಿಂಗ ಒಂದಾದ ಠಾವ ತಿಳಿದು ನೋಡಿರೆ.
ಗುರು ಕಾರುಣ್ಯವಾದ ಬಳಿಕ
ಅಂಗದ ಮೇಲೆ ಲಿಂಗವಿರಬೇಕು.
ಲಿಂಗವಿಲ್ಲದ ಗುರುಕಾರುಣ್ಯವು
ಬತ್ತಿದ ಕೆರೆಯಲ್ಲಿ ತಾವರೆಯ ಬಿತ್ತಿದಂತೆ ಕಾಣಾ !
ರಾಮನಾಥ ॥೮೦॥

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು.
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ ! ರಾಮನಾಥ ॥೮೧॥

ಘಟವನೊಡೆದು ಬಯಲ ನೋಡಲದೇಕೆ?
ಘಟದೊಳಗಿಪ್ಪುದೆ ಬಯಲೆಂದರಿದಡೆ ಸಾಲದೆ?
ಪಟವ ಹರಿದು ತಂತುವ ನೋಡಲದೇಕೆ?
ಆ ಪಟವೆ ತಂತುವೆಂದರಿದಡೆ ಸಾಲದೆ?
ಕಟಕವ ಮುರಿದು ಕಾಂಚನವ ನೋಡಲದೇಕೆ?
ಆ ಕಟಕವೆ ಕಾಂಚನವೆಂದರಿದಡೆ ಸಾಲದೆ?
ತನ್ನನಳಿದು ಘನವ ನೋಡಲದೇಕೆ?
ತಾನೆ ಘನವೆಂದರಿದಡೆ ಸಾಲದೆ? ಹೇಳಾ ! ರಾಮನಾಥ ॥೮೨॥

ಚಿನ್ನದೊಳಗಣ ಬಣ್ಣವ ಆ ಚಿನ್ನ ತನ್ನ ತಾನರಿವುದೆ?
ಕಬ್ಬು ರುಚಿಸಬಲ್ಲುದೆ ತನ್ನ ತಾನೆ?
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ?
ರಾಮನಾಥ ॥೮೩॥

ಜಂಬೂದ್ವೀಪವನೆಲ್ಲ ತಿರಿಗಿದಡೇನು?
ಜಂಬುಕ ಶಂಭುಧ್ಯಾನದಲ್ಲಿ ಸ್ವೈವೆರಗಪ್ಪುದೆ?
ಕುಂಭಿನಿಯ ತಿರಿಗಿ ಕೋಟಿ ತೀರ್ಥವ ಮಿಂದಡೇನು?
ಶಂಭು ! ನಿಮ್ಮಲ್ಲಿ ಸ್ವಯವಾಗದವನು
ಕುಂಭಿನಿಯ ತಿರಿಗಿದ ಡೊಂಬನಂತೆ ಕಾಣಾ !
ರಾಮನಾಥ ॥೮೪॥

ಜಗದೊಳಗಣ ಮನುಜರು ಸೋಗೆಗನಂತಿಪ್ಪರು.
ಸೋಗೆಗನಾಡಿಸುವ ಓಜೆ ಬೇರ್ರೈ.
ಸೋಗೆಗಳನೀಡಾಡಿ ಓಜ ತಾ ಹೋದರ್ರೈ
ಸೋಗೆಗ ನುಡಿಯಬಲ್ಲದೆ? ರಾಮನಾಥ ॥೮೫॥

ಜ್ವರ ಪೀಡಿಸಿದ ಮನುಜರಿಗೆ ನೊರೆವಾಲು ಸೊಗಸುವುದೆ?
ಭವಜನ್ಮದಲ್ಲಿ ಬರುವ ಕ್ರೂರರ್ಮಿಗಳಿಗೆ
ಶಿವಾಚಾರವ ಹೇಳಿದಡೆ
ಹಗೆಯ ಮಾಡುವರು ಕಾಣಾ !
ರಾಮನಾಥ ॥೮೬॥

ಜ್ವರ ಬಡಿದ ಬಾಯಿಗೆ
ನೊರೆವಾಲು ಉರಸುವುದೆ?
ನರಕದಲ್ಲಿ ಬೀಳುವ ಮನುಜರಿಗೆ
ಶಿವಭಕ್ತಿಯೆಂಬುದು ಕಿರುಗಹಿ ಕಾಣಾ !
ರಾಮನಾಥ ॥೮೭॥

ತನು ತನ್ನ ದೆಸೆಯಲೇಸು ದಿನವಿರ್ದಡೇನು?
ಮನ ತನ್ನ ಹರಿದತ್ತ ಹರಿದ ಬಳಿಕ.
ಕೆನೆಯಿಲ್ಲದ ಮೊಸರ ಕಡೆದಡೆ
ಅಲ್ಲಿ ಒಂದು ಹನಿ ತುಪ್ಪವಿಲ್ಲ ಕಾಣಾ !
ರಾಮನಾಥ ॥೮೮॥

ತನ್ನೊಳಗಣ ಅರಿವು ತನ್ನಲ್ಲಿಯೇ ತೋರಿದಲ್ಲದೆ
ಅನ್ಯರಲ್ಲಿ ತೋರಬಲ್ಲದೆ?
ತನ್ನಲ್ಲಿ ತಾನೆ ಇದ್ದಿತ್ತು.

ತನ್ನ ತಾನೆ ಪಕ್ವಕ್ಕೆ ಬಂದು
ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನೇನೆಂಬೆನಯ್ಯಾ
ರಾಮನಾಥ ||೮೯||

ತಲೆಯಿಲ್ಲದ ಗುರು, ಕಾಲಿಲ್ಲದೆ ನಿಂದ ನೋಡ !
ಒಡಲಿಲ್ಲದ ಶಿಷ್ಯನಾದ ಪರಿಯ ನೋಡ !
ಗುರುವಿನ ಒಡಲ ಬಗೆದು ಹುಟ್ಟಿದಾತ
ಒಡನೆ ಗುರುಸಹಿತ ನಿಂದ ನಿಲವನೇನೆಂಬೆನಯ್ಯಾ !
ರಾಮನಾಥ ||೯೦||

ತಾಯ ಗರ್ಭದ ಶಿಶು ತಾಯ ಕುರುಹನರಿಯದು.
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು.
ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು.
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ !
ರಾಮನಾಥ ||೯೧||

ತೀವಿ ಕುಳ್ಳಿರ್ದ ಸಭೆ ಈಯಬಲ್ಲುದೆ ದಾನವ?
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ?
ಇರಿಯಬಲ್ಲರೆ ನೂರಕ್ಕೊಬ್ಬ ಸಹಸ್ರಕ್ಕೊಬ್ಬ.
ಹುಣಿಸೆಯ ಹೂವೆಲ್ಲ ಕಾಯಾಗಬಲ್ಲುದೆ? ರಾಮನಾಥ ||೯೨||

ತೊಡೆಯಲ್ಲಿ ಮುದ್ರೆಯನೊತ್ತಿದಡೇನು?
ಅದು ನಡೆಯಲ್ಲಿ ಶುಚಿಯಾಗಬಲ್ಲುದೆ?
ಮಡಿಲಲ್ಲಿ ಲಿಂಗವ ಕಟ್ಟಿದಡೇನೊ?
ಲೋಕದ ಅಜ್ಞಾನಿತನ ಬಿಡುವುದೆ?
ನಡೆ ನುಡಿ ಸತ್ಯಸದಾಚಾರಿಗಳು
ಎಡೆಯೆಡೆಗೊಬ್ಬರು ಕಾಣಾ ! ರಾಮನಾಥ ||೯೩||

ದರುಶನ ತಪ್ಪುಕ ಪ್ರಥಮ ಪಾತಕ.
ಪರುಶನ ತಪ್ಪುಕ ದ್ವಿತೀಯ ಪಾತಕ.
ಗುರು ತಪ್ಪುಕ ತೃತೀಯ ಪಾತಕ.
ಪಾರದ್ವಾರಿ ಚತುರ್ಥ ಪಾತಕ.

ಮಾಂಸಾಹಾರಿ ಪಂಚಮ ಮಹಾಪಾತಕ.
ಈ ಅಯ್ವರೊಡನೆ ನುಡಿಯಲಿಲ್ಲಯ್ಯ,
ರಾಮನಾಥ ॥೯೪॥

ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ.
ಆಸೆ ಮಾಡ, ನೋಡ ಅನ್ಯದೈವಂಗಳಿಗೆ.
ದೇಶದ ಪಿಶಾಚಿಗಳಿಗೆ ಆಶೆ ಮಾಡ ನೋಡ !
ಆಸೆ ಮಾಡಿದನಾದಡೆ ಅವ ದಾಸನ ಕುಲವಲ್ಲ
ಅವ ಅನ್ಯಕುಲ ಕಾಣಾ ! ರಾಮನಾಥ ॥೯೫॥

ದಾಸಿ ವೇಶಿ ಮದ್ದು ಮಾಂಸ ಸುರೆ ಭಂಗಿ ಹೊಗೆ
ಅನ್ಯದೈವ ಭವಿಸಂಗ–ಇಷ್ಟುಳ್ಳನ್ನಕ್ಕ
ಅವ ಭಕ್ತನಲ್ಲ, ಜಂಗಮನಲ್ಲ.
ಅವರಿಬ್ಬರ ಮೇಳಾಟವೆಂತೆಂದಡೆ
ಹೀಹಂದಿ ಹಡಿಕೆಯ ತಿಂದು
ಅವು ಒಂದರ ಮೋರೆಯನೊಂದು
ಮೂಸಿದಂತೆ ಕಾಣಾ ! ರಾಮನಾಥ ॥೯೬॥

ದೇಹಗೊಂಡು ಹುಟ್ಟಿದವರು
ಒಪ್ಪಚ್ಚಿ ದೇಹಾರವ ಮಾಡುವಿರಯ್ಯ.
ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ
ಆಹಾರವ ಕೊಂಡಡೆ.
ಕೋಳಿ ಹುಳವನಾಯ್ದುತಿಂದಂತೆ ಕಾಣಾ !
ರಾಮನಾಥ ॥೯೭॥

ಧರಣಿಯ ಪಸರಿಸಿ, ಉರಗನನಡಿಯಿಟ್ಟು
ಶರಧಿಯೇಳಕ್ಕೆ ಎರದನೊಕ್ಕುಡಿತೆ ಉದಕವ
ಹರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು
ಅರಿದಂತಿರ್ದ ಕಾಣಾ ! ರಾಮನಾಥ ॥೯೮॥

ಧರ್ಮವನೆತ್ತುವವರ ಮಹಾಧರ್ಮಿಗಳೆಂದೆಂಬಿರಿ.
ನಿಮ್ಮ ಧರ್ಮವನಾರು ಅರಿದವರಿಲ್ಲ !

ಧರ್ಮಗಳಿನಿಕ್ಕಿ ಉತ್ತ ಭೂಮಿಯೆ ಡೊಣಿ
ನೀನೆಮ್ಮನೆಲ್ಲರ ನೋಡಿ ಸಲಹಿದ್ಯೆ, ರಾಮನಾಥ ॥೯೯॥

ನಂಬಿ ನಚ್ಚಿದೆನೆಂದು ಮನವನಿಂಬುಗೊಡದಿರು.
ಕಾಯದ ಮಾಯದ ಕಪಟ ಕರ್ಮ ಸಂಸಾರಕ್ಕೆ
ತನು ಮನ ಧನದಲ್ಲಿ ನೆನಹುಳ್ಳವರ
ಕನಸಿನಲ್ಲಿ ಅರಿಯ, ನಮ್ಮ ರಾಮನಾಥ ॥೧೦೦॥

ನಂಬಿದ ಚೆನ್ನನ ಅಂಬಲಿಯನುಂಡ.
ಕೆಂಬಾವಿಯ ಭೋಗಯ್ಯನ ಹಿಂದಾಡಿ ಹೋದ.
ಕುಂಭದ ಗತಿಗೆ ಕುಕಿಲಿರಿದು ಕುಣಿದ.
ನಂಬದೆ ಕರೆದವರ
ಹಂಬಲನೊಲ್ಲನೆಮ್ಮ ರಾಮನಾಥ ॥೧೦೧॥

ನಡೆ ನೋಟ ಸೊಲ್ಲೆಡೆಯಲ್ಲಿ ಒಂದು ಕಿಚ್ಚು.
ಮಡದಿ ಪುರುಷರೆಡೆಯಲ್ಲಿ ಒಂದು ಕಿಚ್ಚು.
ತಡದುಂಬೆಡೆಯಲ್ಲಿ ಒಂದು ಕಿಚ್ಚು.
ಪಡೆದರ್ಥ ಕೆಟ್ಟೆಡೆಯಲ್ಲಿ ಒಂದು ಕಿಚ್ಚು.
ಕೂಡಿದ ವ್ಯಾಮೋಹದೆಡೆಯಲ್ಲಿ ಒಂದು ಕಿಚ್ಚು.
ಇಂತೀ ಐದು ಕಿಚ್ಚನಿಕ್ಕಿ
ಬಾಯಲ್ಲಿ ಮಣ್ಣಹೊಯಿದು ಕೆಡಿಸಿದೆ !
ರಾಮನಾಥ ॥೧೦೨॥

ನಾನೊಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ ! ರಾಮನಾಥ ॥೧೦೩॥

ನಿಜವುಂಡ ನಿರ್ಮಲದಲೊದಗಿನ ಜ್ಯೋತಿಯನು
ಮರಳಿ ಪ್ರಸಾದರೂಪು ತಾನಾಗಿ
ನಿಜ ನಿಂದು ಬ್ರಹ್ಮಾಂಡ ಬೆಳಗಿ ತೋರುತ್ತದೆ
ಮಹಾಪ್ರಸಾದಿಯಲ್ಲಿ ರಾಮನಾಥ ॥೧೦೪॥

ನಿಡಿದೊಂದು ಕೋಲುವನು ಕಡಿದು ಎರಡ ಮಾಡಿ
ಅಡಿಯ ಹೆಣ್ಣ ಮಾಡಿ, ಒಡತಣದ ಗಂಡ ಮಾಡಿ
ನಡುವೆ ಹೊಸದಡೆ ಹುಟ್ಟಿದ ಕಿಚ್ಚು ಹೆಣ್ಣೊ ಗಂಡೊ?
ರಾಮನಾಥ ॥೧೦೫॥

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು?
ಅದು ಪಟ್ಟಣವೆಂದೆನಿಸೂದು !
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ
ಅದು ನಟ್ಟಡವಿ ಕಾಣಾ ! ರಾಮನಾಥ ॥೧೦೬॥

ನೀನೀಶನೀಯದೆ ಮಾನಿಸನೀವನೆ?
ನೀನೀಸುವ ಕಾರಣ ಮಾನಿಸನೀವನು.
ಆ ಮಾನಿಸನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೆ ಶರಣೆಂಬೆನಯ್ಯಾ, ರಾಮನಾಥ ॥೧೦೭॥

ನೆರೆದರೆ ಗಣಂಗಳು ! ಹರದಡೆ ಕಂಚುಗಾರರು !
ಲಿಂಗವ ಮಾರಿ ಉಂಬ ಭಂಗಾರರು !
ತಮ್ಮ ತಳಿಗೆಯ ಕೊಂಡು ಹೋಗಿ
ಅನ್ಯರ ಮನೆಯಲುಂಬ ಕುನ್ನಿಗಳನೇನೆಂಬೆ?
ರಾಮನಾಥ ॥೧೦೮॥

ನೆರೆ ನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯವೆ?
ಜಗವೆಲ್ಲಾ ಅರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆದಡೆ ಬಂದುದು ಕರಸ್ಥಲಕ್ಕೆ.
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ ॥೧೦೯॥

ಪರವಧುವ ನೆರೆಯದೆ, ಪರಧನವ ತುಡುಕದೆ,
ಪರದೈವದಿಚ್ಛೆವಡೆಯದೆ,
ಗುರು ಲಿಂಗ ಜಂಗಮಕ್ಕೆ ವರದಾಸನಾದಾತನೆ
ಧರೆ ಮೂರಕ್ಕೆ ಗುರುವಾಗಿಪ್ಪನೈ, ರಾಮನಾಥ ॥೧೧೦॥

ಪ್ರಾಣನ ಕಳೆ ಪ್ರಕೃತಿಯಲ್ಲಿ ಅಡಗಿ
ಪ್ರಕೃತಿಯ ಕಳೆ ಪ್ರಾಣನಲ್ಲಿ ಅಡಗಿ
ಲಿಂಗವೆಂದರಿದು ಅಂಗೈಸಿ ಅನುಭವಿಸಬಲ್ಲವರ
ಲೆಂಗಿ ನಾನಪ್ಪೆನ್ನೈ, ರಾಮನಾಥ ॥೧೧೧॥

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ ! ರಾಮನಾಥ ॥೧೧೨॥

ಬಯಲ ಬಣ್ಣವ ಮಾಡಿ;
ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ? ರಾಮನಾಥ ! ॥೧೧೩॥

ಬರು ಸಠಗನ ಭಕ್ತಿ ದಿಟವೆಂದು ನಚ್ಚಲು ಬೇಡ.
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ! ರಾಮನಾಥ ॥೧೧೪॥

ಬಿಂದುವಿನೊಳಗೆ ನಾದ ಹೊಂದಿರ್ದ ಭೇದವನು
ಲಿಂಗದೊಳಗೆ ಶರಣ ಸಂದಿರ್ದ ಭೇದವನು
ಲೋಕದ ಸಂದೇಹಿಗಳೆತ್ತ ಬಲ್ಲರೈ ! ರಾಮನಾಥ ॥೧೧೫॥

ಬೆಕ್ಕು ನಾಯಿ ಶಿವಭಕ್ತರೊಕ್ಕು ಮಿಕ್ಕುದ ಕೊಂಡಡೆ
ಸದಾಚಾರಿಯಾಗಬಲ್ಲುದೆ? ಭೃತ್ಯಾಚಾರಿಯಾಗಬಲ್ಲುದೆ?
ಜಂಗಮಲಿಂಗದಲ್ಲಿ ನಂಬುಗೆಯಿಲ್ಲದೆ
ಒಕ್ಕು ಕೊಂಡ ಪ್ರಸಾದ
ಬೆಕ್ಕು ನಾಯಿ ತಿಂದಂತೆ ಕಾಣಾ ! ರಾಮನಾಥ ॥೧೧೬॥

ಭಂಜಿಸಿಹೆನೆಂದೆಂಬೆ ಹಲಬರು
ಭಂಜನೆಗೆ ಸಿಲುಕುವವು ಪ್ರಾಣಿಗಳಲ್ಲದೆ
ಲಿಂಗವು ಭಂಜನೆಗೆ ಸಿಲುಕುವನೆ? ತಾತ್ಪರ್ಯಕ್ಕಲ್ಲದೆ.
ಆ ಲಿಂಗದೆಂಜಲ ತಿಂದು ವೈಶಿಕವ ಮಾಡಿದಡೆ
ಅದು ನಂಜಾಗಿ ಕಾಡುವದು ಕಾಣಾ ! ರಾಮನಾಥ ॥೧೧೭॥

ಭಕ್ತನ ಮಠವೆಂದು ಭಕ್ತ ಹೋದಡೆ
ಆ ಭಕ್ತ ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು
ಹೊಡೆಗೆಡೆದು ಒಡಗೊಂಡು ಬಂದು
ವಿಭೂತಿ ವೀಳ್ಯವನ್ನಿಕ್ಕಿ ಪಾದಾರ್ಚನೆಯಂ ಮಾಡಿಸಿ
ಒಕ್ಕುದ ಕೊಂಡು ಓಲಾಡುತ್ತಿಪ್ಪುದೆ ಭಕ್ತಿ.
ಹೀಂಗಲ್ಲದೆ ಬೆಬ್ಬನೆ ಬೆರತು, ಬಿಬ್ಬನೆ ಬೀಗಿ
ಅಹಂಕಾರಭರಿತನಾಗಿಪ್ಪವನ ಮನೆಯ
ಲಿಂಗಸನುಮತರು ಹೊಗರು ಕಾಣಾ ! ರಾಮನಾಥ ॥೧೧೮॥

ಭಕ್ತಿಯ ಬಲ್ಲವರಿಗೆ ಸತ್ಯ ಸದಾಚಾರವ ಹೇಳಿದಡೆ
ನಂಬುವರು, ನಚ್ಚುವರು, ಮಚ್ಚುವರು.
ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ
ಸತ್ಯ ಸದಾಚಾರ ಹೇಳಿದಡೆ
ಕಚ್ಚುವರು, ಬಗುಳುವರು ಕಾಣಾ ! ರಾಮನಾಥ ॥೧೧೯॥

ಭಕ್ತಿಯ ಬಲ್ಲವರು ನಚ್ಚಿ ಮೆಚ್ಚಿ ಮನವನೊಚ್ಚತಗೊಡುವರು.
ಭಕ್ತಿಯನರಿಯದ ಬಲುಪಾಪಿ ಜೀವಿಗಳು
ಕಚ್ಚುವರು ಬಗುಳುವರು, ರಾಮನಾಥ ॥೧೨೦॥

ಭವಿಯ ಕಳೆದು ಭಕ್ತನಾದ ಬಳಿಕ
ಭವಿ ನಂಟನೆಂದು ಹೊಗಿಸಲಾಗದು.
ನಂಟುತನಕ್ಕೆ ಆತ್ಮನಿಚ್ಚೆಗೆ ಅಳುಪಿ ಭವಿಯೊಡನುಂಡಡೆ
ಹಂದಿಯ ಬಾಯ ತುತ್ತ ನಾಯಿ ಸೆಳತಿಂದಂತೆ ಕಾಣಾ !
ರಾಮನಾಥ ॥೧೨೧॥

ಭವಿಯ ಮನೆಯ ಅನ್ನ
ಸವಿಯಾಯಿತ್ತೆಂಬ ಭಕ್ತಂಗೆ ಭವಿಪಾಕನರಕ.
ಆಗಳಂತೆ ಭವಿಗೆ ಮಾಡಿದ
ಹುಳುಗುಂಡ ಭಕ್ತಂಗಪ್ಪುದು ತಪ್ಪದು
ಆ ಭವಿಗೆ ಭವಂ ನಾಸ್ತಿ ಕಾಣಾ ! ರಾಮನಾಥ ॥೧೨೨॥

ಮಂಡೆಯ ಬೋಳಿಸಿಕೊಂಡು
ಮಡಿದು ಗೋಸಿಯ ಕಟ್ಟಿದಡೇನು?

ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ
ಭಂಡರನೊಲ್ಲನೆಮ್ಮ ರಾಮನಾಥ ॥೧೨೩॥

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ
ರಾಮನಾಥ ॥೧೨೪॥

ಮಣಿಗಣ ಸೂತ್ರದಂತೆ ತ್ರಿಣೆಯ ನೀನಿಪ್ಪೆಯಯ್ಯ.
ಎಣಿಸುವಡೆ ತನು ಭಿನ್ನ ಆತ್ಮನೊಬ್ಬನೆ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ, ರಾಮನಾಥ ॥೧೨೫॥

ಮಣಿವಡೆ ಶಿವಭಕ್ತ ಮಣಿಯ ಕಟ್ಟಲೆ ಬೇಕು.
ಮಣಿಯದಿರ್ದಡೇನು? ಶಬುದಗುಂಡಿಗೆ !
ಫಣಾಮಣಿದೇವರ ಮಣಿಮಕುಟದಲದೆ,
ಅದು ಮಣಿಯಲ್ಲದೇನು? ಹೇಳು ! ರಾಮನಾಥ ॥೧೨೬॥

ಮನಮುಟ್ಟಿ ನೆನೆವಲ್ಲಿ ತನು ನಿಮ್ಮದಾಯಿತ್ತು.
ತನುಮುಟ್ಟಿ ಅಪ್ಪಿ, ಮನಮುಟ್ಟಿ ನೆರದು
ವನಿತೆಯರ ಕೂಟಕ್ಕೆ ತೆರಪಿಲ್ಲವಾಯಿತ್ತು.
ಜನನ ಮರಣದ ಬಾಧೆ ಹರಿಯಿತ್ತು.
ಈಶ್ವರ ! ನಿಮ್ಮ ಪಾದಸೇವೆಯಿಂದ ಕಾಣಾ !
ರಾಮನಾಥ ॥೧೨೭॥

ಮನೆಯಲ್ಲಿ ಅಟ್ಟೆನೆಂದಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ !
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ ! ರಾಮನಾಥ ॥೧೨೮॥

ಮಹಾಘನವಪ್ಪ ಬೋನವನು
ಒಂದನುವಿನ ಪರಿಯಾಣದಲ್ಲಿ ಹಿಡಿದು
ಗುರುಲಿಂಗವು ಒಳಗಾದ
ಲಿಂಗವಾರೋಗಣೆಯ ಮಾಡಿ
ಮಿಕ್ಕುದ ಪ್ರಸಾದವೆ? ಅಲ್ಲಲ್ಲ.
ಮಹಾಘನವಪ್ಪ ಲಿಂಗವ
ಒಂದನುವಿನಲ್ಲಿ ತಂದಿರಿಸಿದ ಆತನ
ಮನವೆ ಪ್ರಸಾದ ಕಾಣಾ ! ರಾಮನಾಥ ॥೧೨೯॥

ಮಾಡಿದ ಕರ್ಮವನೂಡಯ್ಯ ಎನ್ನ ಮನದಣಿವನ್ನಕ್ಕ.
ಬೇಡೆನ್ನೆನು, ಮಾರ್ಕೊಳ್ಳೆನು.
ಎಲೆ ರೂಢಿಗೀಶ್ವರನ ಕೂಡುವೆನು ನೀರಡಸಿದಂತೆ,
ರಾಮನಾಥ ॥೧೩೦॥

ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ
ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯ ! ರಾಮನಾಥ ॥೧೩೧॥

ಮಾಡಿದಲ್ಲದೆ ಮನೆಯೊಳಗಾಗದು ಬಯಲು
ಕಣ್ಣು ಕಂಡಲ್ಲದೆ ಪರವಾಗದು
ಮನ ಪರವೆಂದಲ್ಲದೆ ಪರವಾಗದು
ಈ ಪರಿಯ ನರರೆತ್ತ ಬಲ್ಲರೈ? ರಾಮನಾಥ ॥೧೩೨॥

ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ
ಗೋರಿಗೊಳಿಸಿ ಕುರಿಯ ಕೊರಳನೆ ಕೊಯ್ದುಂಬ
ಕ್ರೂರಕರ್ಮಿಗಳನವರ ಶಿವಭಕ್ತರೆನಬಹುದೆ?
ಆರೈಯದೆ ಅವನ ಮನೆಯಲುಂಡ ಭಕ್ತ
ಅಘೋರನರಕಕ್ಕಿಳಿವ ಕಾಣಾ ! ರಾಮನಾಥ ॥೧೩೩॥

ಮುಂಡೆಗೆ ಮುಡಿಕಟ್ಟೇಕೊ?
ಗುಂಡಂಗೇಕೊ ಗುರುಪದ ಭಕ್ತಿ?

ಚಂಡಿಕೆಯ ತಲೆಯ ಚಾಂಡಾಲಂಗೆ
ಅಖಂಡಿತ ಲಿಂಗದ ಅನುವೇಕೆ? ಹೇಳ ! ರಾಮನಾಥ ॥೧೩೪॥

ಮೆಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ?
ಮೆಳೆ ಶಿವಭಕ್ತನಾಗಬಲ್ಲುದೆ?
ನಿಮ್ಮ ತನುಮನಧನವನರಿಯದಿದ್ದಡೆ
ಸದುಭಕ್ತರಹರೆ? ರಾಮನಾಥ ॥೧೩೫॥

ಮೊಲೆ ಮುಡಿ ಬಂದಡೆ ಹೆಣ್ಣೆಂಬರು.
ಗಡ್ಡ ಮೀಸೆ ಬಂದಡೆ ಗಂಡೆಂಬರು.
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ! ರಾಮನಾಥ ॥೧೩೬॥

ವಿಷಯದ ಪಿತ್ತ ತಲೆಗೇರಿದಲ್ಲಿ
ವಿವೇಕವೆಂಬ ದೃಷ್ಟಿ ನಷ್ಟವಾಗಿ
ಪಶುಪತಿಯ ನೆನಹುಗೆಟ್ಟು ಮತಿಮಂದನಾದಲ್ಲಿ
ಮಂತ್ರ ನೆನಹುಂಟೆ ! ಹೇಳ ! ರಾಮನಾಥ ॥೧೩೭॥

ವೇಶಿಯ ಎಂಜಲ ತಿಂದು
ಈಶ್ವರಪ್ರಸಾದವ ಭುಂಜಿಸಿದಡೆ
ಓಸರಿಸಿತ್ತಯ್ಯ ಲಿಂಗವು ಆ ದ್ರೋಹಿಗೆ !
ಭಾಷೆ ತಪ್ಪುವನು ! ಭವದಲ್ಲಿ ಬಳಲುವನೆಂದವನ ಕಂಡು
ಹೇಸಿ ಕಡೆಗೆ ತೊಲಗಿದೆನು ಕಾಣಾ ! ರಾಮನಾಥ ॥೧೩೮॥

ವೇಷದ ಕೂಡೆ ವಾಸಿಗೆ ಹೋರುವವನು ಈಶ್ವರದ್ರೋಹಿ.
ವೇಷವ ಈಶ್ವರನೆಂದು ತಿಳಿಯದವ
ಪಾಶಕ್ಕೆ ಸಿಕ್ಕದ ಪಶುವಿನಂತೆ ಕಾಣ, ರಾಮನಾಥ ॥೧೩೯॥

ವೇಷವನೂ ವೇಶಿಯನೂ ಸರಿಯೆಂಬೆ.
ವೇಷವು ಲೋಕವ ಹಾರುವದು.
ವೇಶಿಯೂ ಲೋಕವ ಹಾರುವಳು.
ವೇಷವ ಹೊತ್ತು ಲೋಕವ ಹಾರದಿರ್ದಡೆ
ಆತನ ಈಶ್ವರನೆಂಬೆ ಕಾಣಾ ! ರಾಮನಾಥ ॥೧೪೦॥

ವೇಷವ ಹಲ್ಲಣಿಸುವ ಹಿರಿಯಣ್ಣಂಗೇನು?
ವೇಷವ ಹೊತ್ತು ದೋಷದಲ್ಲಿ ನಡೆವ ರಾಶಿಮಾ(ನವ)
ವೇಷಗಳ್ಳರ ಕಂಡು ವೇಶಿಯೆಂದ, ರಾಮನಾಥ ॥೧೪೧॥

ವೇಷವ ಹೊತ್ತ ಹಿರಿಯರು ಈಶ್ವರಧ್ಯಾನದಲ್ಲಿರಬೇಕು.
ವೇಷವ ತೋರಿ ಗ್ರಾಸಕ್ಕಾಗಿ ಆಸೆಮಾಡಿ
ಲೋಗರ ಮನೆಯ ಕಾದು
ಗ್ರಾಸವ ಪಡೆದು ಉದರವ ಹೊರೆವ ವೇಷವು
ವೇಶಿಯಿಂದವು ಕರಕಷ್ಟ ! ರಾಮನಾಥ ॥೧೪೨॥

ವೇಷವ ಹೊತ್ತು ದೋಷದಲ್ಲಿ ನಡೆದಡೆ
ದೋಷಕ್ಕೆ ವೇಷ ಭಂಡ.
ಮೊದಲೆ ವೇಷವ ಕಂಡು ಲೇಸೆಂದು
ಕೊಂಡಾಡುವ ದೋಷಿಗಳ
ನರಕದಲ್ಲಿಕ್ಕುವ ಕಾಣಾ ! ರಾಮನಾಥ ॥೧೪೩॥

ವೇಷಕ್ಕೆ ಅಂಜುವೆ ದೋಷಕ್ಕೆ ಹೇಸುವೆ !
ಈಶ್ವರನಾಗಿ ಎನ್ನ ಕೈಯಲ್ಲಿ ತನ್ನ
ಆರಾಧಿಸಿಕೊಳಲೊಲ್ಲದೆ
ಹದಿನೆಂಟು ಜಾತಿಯ ಹೇಸಿಕೆಯ
ಕೂಳ ತಿಂಬವರನೇನೆಂಬೆನೈ,
ರಾಮನಾಥ ॥೧೪೪॥

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ !
ಅಂಬರಕ್ಕೆ ಗಡಿಗೆ ಬೋದಿಗೆಯಿಲ್ಲದಂತಿರಿಸಿದೆ !
ಎಲೆ ಮೃಡನೆ ! ನೀನಲ್ಲದೆ ಉಳಿದ ದೈವಂಗಳಿಗಹುದೆ?
ರಾಮನಾಥ ॥೧೪೫॥

ಶಿವಪೂಜೆಯೆತ್ತ, ವಿಷಯದ ಸವಿಯೆತ್ತ;
ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು
ವೇಶಿಯರ ಎಂಜಲ ಹೇಸದೆ ತಿಂಬ
ದೋಷಿಗಳನೇನೆಂಬೆನೈ, ರಾಮನಾಥ ॥೧೪೬॥

ಶಿವಭಕ್ತನು ಹೋಗಿ ತನ್ನೊಡಲಿಚ್ಚೆಗೆ ಭವಿಯ
ಮನೆಯಲುಂಡನಾದಡೆ
ಮಡೆಕೆಯ ಕೂಳ ತಿಂದ ತುಡುಗಣಿ ನಾಯಂತೆ ಆ ಭಕ್ತ.
ಮೃಢ ! ನೀನಿಲ್ಲದ ಮನೆಯ ಕೂಳು
ಹೊಲೆಯರ ಮನೆಯ ಅಡಗಿನಿಂದ ಕರಕಷ್ಟ ಕಾಣಾ,
ರಾಮನಾಥ ॥೧೪೭॥

ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದಡೆ
ಅವರರಸಿಯ ಪಾರ್ವತಿಯ ಸತಿಯೆಂದು ಕಾಣಬೇಕು.
ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ
ಮಾತನಾಡುವ ನರಕಿಗಳನೇನೆಂಬೆ, ರಾಮನಾಥ ॥೧೪೮॥

ಶ್ರೀ ಗುರು ಲಿಂಗ ಜಂಗಮಕ್ಕೆ
ಅರ್ಥ ಪ್ರಾಣಾಭಿಮಾನವ ಕೊಟ್ಟು
ಅಹಂಕಾರವಳಿದಿಜಹಂತು ಪುರಾತನರ ಮನೆಯಲ್ಲಿ
ಎತ್ತಾಗಿ ಹುಟ್ಟಿಸಯ್ಯಾ,
ತೊತ್ತಾಗಿ ಹುಟ್ಟಿಸಯ್ಯಾ,
ಬಾಗಿಲ ಕಾಯ್ದಿಪ್ಪಂತೆ ಸೊಣಗನಾಗಿ ಹುಟ್ಟಿಸಯ್ಯಾ,
ಜಂಗಮಲಿಂಗವೇ ಶಿವನೆಂದು ನಂಬಿ ನಮಸ್ಕರಿಸುವ
ಪುರಾತನರ ಮನೆಯ ಬೇಲಿಯಾಗಿ ಹುಟ್ಟಿಸಯ್ಯಾ,
ರಾಮನಾಥ ॥೧೪೯॥

ಸಣ್ಣ ನನೆಯೊಳಗಣ ಪರಿಮಳವ
ಹೊರಸೂಸಿ ಇದಿರಿಂಗೆ ಅರುಹಿಸಬಲ್ಲುದೆ ವಾಯು?
ಕೊಡಗೂಸಿನೊಳಗಣ ಮೊಲೆ ಮುಡಿಯ
ಹಡೆದ ತಾಯಿ-ತಂದೆಗಳೆಂದಡೆ
ಕಾಣಿಸಿಕೊಡಬಲ್ಲರೆ ಕಾಬವರ ಕಣ್ಣಿಗೆ?
ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ಕಾಣಾ !
ರಾಮನಾಥ ॥೧೫೦॥

ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ ! ರಾಮನಾಥ ॥೧೫೧॥

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ.
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ !
ರಾಮನಾಥ ॥೧೫೨॥

ಸತಿಯರ ಸಂಗವನು ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೆ !
ರಾಮನಾಥ ॥೧೫೩॥

ಸರ್ಪನೂ ಕೂರ್ಮನೂ ದಿಕ್ಕರಿಗೆಳೆಂಟೂ
ಭೂಮಿಯ ಹೊತ್ತಿರ್ದಪರೆಂದು
ಅನಿಶಾ ಹೊತ್ತಿಪ್ಪವರಿಗೆ ಅತ್ತಲಾಧಾರ ಇತ್ತಲಾಧಾರ.
ಉತ್ತರಗುಡುವವರಿಗೆ ಇಕ್ಕುವೆ ಮುಂಡಿಗೆಯ.
ಎತ್ತುವರುಳ್ಳಡೆ ತೋರಿರೈ, ರಾಮನಾಥ ॥೧೫೪॥

ಸರ್ವಜ್ಞಾನಿಗಳಾಗಿ ಅಚ್ಚುಗ ಬಡುವಡೆ,
ಹಬ್ಬಿದ ಪಾಪದ ಫಲ ಉಂಬಡೆ,
ಒಬ್ಬಳ್ಳವನೆ ಬಿತ್ತಿ ಆ ಒಬ್ಬಳ್ಳವನೆ ಬೆಳೆವಡೆ,
ಕಬ್ಬುನ ಹುಳಿವಡೆ ಇನ್ನೇವೆ, ರಾಮನಾಥ ॥೧೫೫॥

ಸ್ವಸ್ತಿಕಾಸನದಲ್ಲಿದ್ದು ಅತ್ತಿತ್ತ ಚಲಿಸದೆ
ನೆಟ್ಟೆಲುವ ನೆಟ್ಟನೆ ಮಾಡಿ,
ಅಧೋವಾಯುವನೂರ್ಧ್ವಮುಖಕ್ಕೆ ತಂದು,
ಕಂಠ ಸಂಕೋಚದಿಂದ ಊರ್ಧ್ವವಾಯುವ ನಿಲ್ಲೆಂದು ನಿಲಿಸಿ,
ಮನವ ತೊಡರಿಸಿ,
ಉನ್ಮನಿಯ ಸ್ಥಾನದಲ್ಲಿ ಬಂಧವನವಂ ಮಾಡಿ,
ಅಂತರ್ಬಾಹ್ಯ ವ್ಯಾಪಾರವಳಿದು ನಿಂದುದೆ ಯೋಗ,
ರಾಮನಾಥ ॥೧೫೬॥

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ,
ಸಸಿಯೊಳಗಣ ಫಲಪುಷ್ಪ ರುಚಿಯ ಪರಿಮಳದಂತೆ,
ಮನದ ಮರೆಯ ಮಾತು

ನೆನಹಿನಲ್ಲಿ ಅರಿದು, ನಾಲಗೆಯು ನುಡಿವಾಗಲಲ್ಲದೆ
ಕಾಣಬಾರದು, ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿ,
ರಾಮನಾಥ ॥೧೫೭॥

ಸಾಸಿವೆಯಷ್ಟು ಭಕ್ತಿಯಳ್ಳನ್ನಕ್ಕ
ವೇಶಿಯ ಮುಟ್ಟಿದಡೆ
ಹೊಲೆಯರ ಮನೆಯ ಮುರುಹ ಹೊರಗಿರಿಸಿದಡೆ
ಹಂದಿ ಬಂದು ಮೂಸಿ ಮೇದಂತೆ ಕಾಣಾ !
ರಾಮನಾಥ ॥೧೫೮॥

ಸೊಡರು ಕೆಟ್ಟಡೆ ದೃಷ್ಟಿಯಡಗಿಪ್ಪ ಭೇದವನು
ಒಡಲು ಕೆಟ್ಟಡೆ ಜೀವವಾವೆಡೆಯಲಡಗೂದು?
ಈ ಮರೆಯೆಡೆಯಣ ಭೇದವ ಭೇದಿಸಬಲ್ಲಡೆ
ಪೊಡವಿಗೆ ಗುರುವಪ್ಪನೆಂದು
ಮುಡಿಗೆಯನಿಕ್ಕಿದೆ ಪರಸಮಯಕ್ಕೆಂದು,
ರಾಮನಾಥ ॥೧೫೯॥

ಹಂದಿ ಶ್ರೀಗಂಧವನೆಂದೂ ಒಲ್ಲದು.
ಕುಂದದೆ ಹರಿವುದು ಅಮೇಧ್ಯಕ್ಕೆ.
ಶಿವಭಕ್ತನಾಗಿರ್ದು ಹಿಂದ ಬೆರಸಿದಡೆ
ಆ ಹಂದಿಗಿಂದವು ಕರಕಷ್ಟ ಕಾಣಾ !
ರಾಮನಾಥ ॥೧೬೦॥

ಹಂದಿ ಶ್ರೀಗಂಧವ ಹೂಸಿದಡೇನು?
ಗಂಧರಾಜನಾಗಬಲ್ಲುದೆ?
ನವಿಲು ನಲಿಯಿತ್ತೆಂದಡೆ
ಕಾಕೋಳಿ ಪುಚ್ಚವ ತರಕೊಂಡಂತೆ
ಕರ್ಮಿಗಳ ಭಕ್ತಿ !
ಹೊರವೇಷದ ವಿಭೂತಿ ರುದ್ರಾಕ್ಷಿಯ ಹೂಸಿದಡೇನು
ತೆರನನರಿದು ಮರವೆಯ ಕಳೆದು
ಮಾತಿನಂತೆ ನೀತಿಯುಳ್ಳಡೆ
ಅವರ ಅಜಾತರೆಂಬೆ ಕಾಣಾ ! ರಾಮನಾಥ ॥೧೬೧॥

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಮಿಸುನಿಯ ಚಿನ್ನದಂತೆ.
ಅರೆದು ನೋಡುವ ಚಂದನದಂತೆ.
ಅರಿದು ನೋಡುವ ಕಬ್ಬಿನ ಕೋಲಿನಂತೆ.
ಬೆದರದೆ ಬೆಚ್ಚದೆ ಇರ್ದಡೆ
ಕರವಿಡಿದೆತ್ತಿಕೊಂಬ, ನಮ್ಮ ರಾಮನಾಥನು ॥೧೬೨॥

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲಾ ನಡೆದನಾ ಸುಂಕಕಂಜಿ.
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು !
ಅಳಿಮನದವನ ಭಕ್ತಿ ಇಂತಾಯಿತ್ತು ! ರಾಮನಾಥ ॥೧೬೩॥

ಹಸ್ತಾಬ್ಜ ಮಥನದಿಂದೊತ್ತಿ ಭಸ್ಮವ ಮಾಡಿ
ಮತ್ತೆ ಪಂಚಾಕ್ಷರಿಯ ಜಪಾವಳಿಯ
ಚಿತ್ತ ಶ್ರೋತ್ರದೊಳು ಮತ್ತೆ ಧಾರೆಯನೆರೆಯೆ
ಸತ್ಯವದು ನಿನ್ನಂತೆ, ರಾಮನಾಥ ॥೧೬೪॥

ಹಸಿವಿನಲ್ಲಿ ವಿಷಯದಲ್ಲಿ ಭವಿಯ ಬೆರಸಿದೆನಾದಡೆ
ಅವ ವಿಷಮಾಕ್ಷ ! ನಿಮಗೆ ದೂರ.
ದಶ ಶತಕೋಟಿ ವರುಷ ನರಕದೊಳಗಿಹ ಕಾಣಾ !
ರಾಮನಾಥ ॥೧೬೫॥

ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ ನೀರೆರೆದು
ಮಸಕವಿಲ್ಲದ ಮಾತ ಮನದಲ್ಲಿ ಹೇಳಿ
ಹೆಸರಿಲ್ಲದೆ ಕರೆದಡೆ ಓ ! ಎಂದವ ನೀನೊ ನಾನೋ !
ರಾಮನಾಥ ॥೧೬೬॥

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ.
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ !
ರಾಮನಾಥ ॥೧೬೭॥

ಹಾಸೇಕೆ ಹೊರಸೇಕೆ? ಲೇಸೇಕೆ ಹೊಲ್ಲೆಹವೇಕೆ?
ನಿಮ್ಮ ಸಾತ್ವಿಕರಿದಿರಲ್ಲಿ ನಾನೇಕೆ?
ಸರಿಹೊರಸು ನಿಮ್ಮ ಸರಿಪಂತಿಯೆಂಬ ಹೇಸಿಕೆಯುಂಟೆ?
ರಾಮನಾಥ ॥೧೬೮॥

ಹಿರಿದಪ್ಪ [ಆ] ಹಾರವ ಕೊಂಡು
ಸ್ವರವು ಬಿಂದುವಿನಿಚ್ಚೆಯಲ್ಲಿ
ಹರಿದಾಡುವವರು ಯೋಗಿಗಳೆ?
ಅಲ್ಲಲ್ಲ ನಿಲ್ಲು ! ಸ್ವರವು ಸುಸ್ವರವಾಗಿ
ಬಿಂದು ತರಹರವಾಗಿರಬಲ್ಲಾತನೆ ಯೋಗಿ ಕಾಣಾ !
ರಾಮನಾಥ ॥೧೬೯॥

ಹೂವಿನೊಳಗಣ ಕಂಪ ಹೊರಸೂಸಿ
ಸುಳಿವ ಅನಿಲನಂತೆ
ಅಮೃತದೊಳಗಣ ರುಚಿಯ ನಾಲಿಗೆಯ ತುದಿಯಲ್ಲಿ
ಅರಿವನ ಚೇತನದಂತೆ
ನಿಲವಿಲ್ಲದ ರೂಪ ಕಳೆಯಲ್ಲಿ ವೇದಿಸುವವನ ಪರಿ !
ರಾಮನಾಥ ॥೧೭೦॥

ಹೆಂಬೇಡಿಗೆ ಹಿಡಿಯಬಹುದೆ
ಹೇಳಿಗೆಯೊಳಗಣ ಹಾವ?
ತೊರೆಯಬಹುದೆ ಹೊನ್ನು ಹೆಣ್ಣು ಮಣ್ಣ
ನಿನ್ನನರಿಯದ ನರಗುರಿಗಳಿಗೆ ! ರಾಮನಾಥ ॥೧೭೧॥

ಹೆಣ್ಣ ಕಂಡು ಹೆಚ್ಚಿ ಹೆಕ್ಕಳಬಡುವಂತೆ
ಕಣ್ಣಿಟ್ಟು ನೋಡಿರೋ ಶಿವಲಿಂಗದೇವನ
ಕರಣದಿಚ್ಛೆಗೆ ಹರಿದು, ನರಕದಲ್ಲಿ ನೆರೆದು
ಬರುದೊರೆ ಹೋಗದೆ ಮರೆಯದೆ ಪೂಜಿಸಿ,
ನಮ್ಮ ರಾಮನಾಥನ ॥೧೭೨॥

ಹೇಳಬಲ್ಲಡೆ ಬೋಳು ಕೇಳಬಲ್ಲಡೆ ಬೋಳು
ಹೇಳಲು ಕೇಳಲು ಅರಿಯದಿದ್ದಡೆ
ಇವೆಲ್ಲ ಜಾಳು ಬೋಳು ಕಾಣಾ ! ರಾಮನಾಥ ॥೧೭೩॥

ಹೇಳಿತ್ತ ಕೇಳುವನ ಕೀಳಿನೊಳಗಿರೆ ಲೇಸು !
ಹೇಳಿತ್ತ ಕೇಳದ ಕಡುಮೂರ್ಖನ
ಕೋಣೆಯಲ್ಲಿರಲಾಗದು ! ರಾಮನಾಥ ॥೧೭೪॥

ಹೊಲಬನರಿಯದ ಗುರು
ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ
ಅಂಧಕನಲಾಬ ಹೊಕ್ಕಂತೆ ಕಾಣಾ ! ರಾಮನಾಥ ॥೧೭೫॥

ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ.
ಹಲವೆಲುವಿದ್ದ ಬಾಯಿ ಒಲವರವ ನುಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ ! ರಾಮನಾಥ ॥೧೭೬॥

ಆದ್ಯ ವಚನಕಾರ ಜೇಡರ ದಾಸಿಮಯ್ಯನವರ ವಚನಗಳು

'ವಚನ' ಕನ್ನಡದ ಅನನ್ಯ ಅಭಿವ್ಯಕ್ತಿ ರೂಪ. ಕಾಯಕ–ಜೀವಿಗಳೆನಿಸಿದ ಕಲ್ಯಾಣದಲ್ಲಿ ಬಸವಾದಿ ಶರಣರು, ಹನ್ನೆರಡನೆಯ ಶತಮಾನದಲ್ಲಿ ಸರ್ವಸಮಾನತೆಯ ಸಮಸಮಾಜ ನಿರ್ಮಿತಿಯ ಕನಸು ಹೊತ್ತು ಕೈಕೊಂಡ ಅಪೂರ್ವ ವೈಚಾರಿಕ ಕ್ರಾಂತಿಯ ಸಮರ್ಥ ಮಾಧ್ಯಮ. ಇಡೀ ಬದುಕೇ ಅದರ ವಸ್ತು. ಬದುಕಿನ ಎಲ್ಲ ಸಂಗತಿಗಳಿಗೆ ಸಹಜ ಸ್ಪಂದನೆ, ಎಲ್ಲ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಅದರಲ್ಲಿದೆ. ಸಕಲ ಜೀವಾತ್ಮರ ಲೇಸಿನ ಅದರ ಸಾರ್ವಕಾಲಿಕ ಜೀವನ ಮೌಲ್ಯಗಳು ಎಂದೆಂದಿಗೂ ಜೀವಂತ; ಪ್ರಸ್ತುತ. ಹೀಗಾಗಿ ಅದರ ಅಧ್ಯಯನ–ಚಿಂತನ–ಅನುಸಂಧಾನ ನಿರಂತರವಾಗಿ ನಡೆದು ಬಂದಿದೆ. ಅದಕ್ಕೆ ಸಮಗ್ರ ವಚನ ಸಾಹಿತ್ಯದ ಸಂಪುಟಗಳು ಪ್ರಮುಖ ಆಕರಗಳೆನಿಸಿವೆ.

ಕರ್ನಾಟಕ ಸರಕಾರ ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಸಮಗ್ರ ವಚನ ಸಾಹಿತ್ಯ ಸಂಪುಟಗಳು ಸುಲಭವಾಗಿ ಎಲ್ಲರ ಕೈಗೆ ದೊರಕುವುದು ಅಸಾಧ್ಯ. ಅದನ್ನು ಗಮನಿಸಿದ ಬೆಂಗಳೂರಿನ 'ಇ–ಸಾಹಿತ್ಯ ಡಾಕ್ಯುಮೆಂಟೇಶನ್ ಫೋರಂ' ಅವರು ಈ ಸಂಪುಟಗಳಲ್ಲಿ ಅಳವಟ್ಟ ಪ್ರತಿಯೊಬ್ಬ ಶರಣರ ವಚನಗಳನ್ನು ಪ್ರತ್ಯೇಕಿಸಿ, ಚಿಕ್ಕ ಚಿಕ್ಕ ಪುಸ್ತಕಗಳ ರೂಪದಲ್ಲಿ ಪ್ರಕಟಿಸಿ ಸುಲಭ ಬೆಲೆಯಲ್ಲಿ ದೊರಕುವಂತೆ ಮಾಡುವ ಯೋಜನೆಯನ್ನು ಕೈಕೊಂಡಿರುವುದು ತುಂಬ ಪ್ರಯೋಜನಕಾರಿ ಉಪಕ್ರಮವೆನಿಸಿದೆ.

ಈಗ ಈ ಯೋಜನೆಯ ದ್ವಿತೀಯ ಕೃತಿಯಾಗಿ 'ಆದ್ಯ ವಚನಕಾರ ಜೇಡರ ದಾಸಿಮಯ್ಯನವರ ವಚನಗಳು' ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಶರಣರ ಸಮಗ್ರ ಹಸ್ತಪ್ರತಿ – ಡಿಜಟಲೀಕರಣ ಕಾರ್ಯದಲ್ಲಿ ಸಮರ್ಪಣಾಭಾವದಿಂದ ತಮ್ಮನ್ನು ತೊಡಗಿಸಿಕೊಂಡ ಅಶೋಕ ದೊಮ್ಮಲೂರು ಅವರ ಮಹತ್ವಾಕಾಂಕ್ಷೆಯ ಈ ಯೋಜನೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ. ಜ್ಞಾನದಾಸೋಹದ ಈ ಮಹತ್ವದ ಕಾರ್ಯಕ್ಕೆ ನಾಡಿನ ಎಲ್ಲ ಸಾಹಿತಿಗಳು ಸಂಶೋಧಕರು, ಚಿಂತಕರು ಹಾಗೂ ಸಾರ್ವಜನಿಕರು ಬೆಂಬಲವಾಗಿ ನಿಲ್ಲುವುದು ಅಪೇಕ್ಷಣೀಯವೆನಿಸಿದೆ. ಇ–ಸಾಹಿತ್ಯ ಡಾಕ್ಯುಮೆಂಟೇಶನ್ ಫೋರಂ ಸಲಹಾ ಸಮಿತಿಯ ಎಲ್ಲಾ ಸದಸ್ಯರಿಗೆ ತುಂಬು ಹೃದಯದ ಅಭಿನಂದನೆಗಳು.

– ವೀರಣ್ಣ ರಾಜೂರ

ISBN: 978-81-999876-8-5

ಪ್ರಕಾಶಕರು
ಇ–ಸಾಹಿತ್ಯ ಡಾಕ್ಯುಮೆಂಟೇಶನ್ ಫೋರಂ
ಬೆಂಗಳೂರು

SARAYU